ಪ್ರೊ. ಸಾ. ಕೃ. ರಾ - ಸಮಗ್ರ ಸಾಹಿತ್ಯ - ೪

ದಂಡಿಯ

ಆವಂತಿಸುಂದರೀ

ಕನ್ನಡ ಸಂಕ್ಷಿಪ್ತ ಕಥನ

ವಿದ್ಯಾಲಂಕಾರ
ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ
ಬೆಂಗಳೂರು-11

ದಂಡಿಯ

ಅವಂತಿಸುಂದರೀ

ಕನ್ನಡ ಸಂಕ್ಷಿಪ್ತ ಕಥನ

ಲೇಖಕರು :

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸಂಪಾದಕ :

ಸಾ. ರಾ. ಸುದರ್ಶನ

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಬೆಂಗಳೂರು–560 011

Dandi's Avantisundari Katha,
a concise summary in Kannada by
Vidyalankara Prof. S. K. Ramachandra Rao,
Published by Dr. S. R. Sudarshan,
for Surama Prakashana, the publication wing of
the Prof. S. K. Ramachandra Rao Memorial
Trust (R), 305, 6th Cross, I Block, Jayanagar,
Bangalore-560 011, Phone : 080-26563957,
E-mail : drsrsudarshan@gmail.com

© : Prof. S. K. Ramachandra Rao Memorial Trust (R)

Pages : xii + 78

First Edition : 2008

Price : Rs. 70/-

ISBN-978-81-906740-3-4

Printed by Vagartha, Bangalore. vagartha@yahoo.com

ಅನುಕ್ರಮಣಿಕಾ

	ಮುನ್ನುಡಿ	
	ಲೇಖಕರ ಪರಿಚಯ	
೧.	*ಪೀಠಿಕೆ*	1
೨.	*ದಂಡಿಯ ಪೂರ್ವಜರು*	4
೩.	*ದಂಡಿ*	7
೪.	*ರಾಜಹಂಸನ ಕಥೆ*	11
೫.	*ರಾಜವಾಹನನ ಜನನ*	19
೬.	*ಅಪಹಾರವರ್ಮನ ಕಥೆ*	25
೭.	*ಉಪಹಾರವರ್ಮನ ಕಥೆ*	29
೮.	*ಪೋತಪನ ಕಥೆ*	32
೯.	*ವರರುಚಿಯ ಕಥೆ*	35
೧೦.	*ವ್ಯಾಡಿಯ ಕಥೆ*	36
೧೧.	ಇಂದ್ರದತ್ತನ ಕಥೆ	38
೧೨.	*ಉಪವರ್ಷನ ಕಥೆ*	40
೧೩.	*ದೈವ ರಕ್ಷಿತ*	48
೧೪.	*ಅರ್ಥಪಾಲನ ಕಥೆ*	53
	ಅನುಬಂಧ	
	ಸಂಸ್ಕೃತ ಮೂಲ	58

ಮುನ್ನುಡಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ೧೯೬೮ ರಲ್ಲಿ ಮಯೂರ ಮಾಸಪತ್ರಿಕೆಯಲ್ಲಿ ಸುಮಾರು ೭ ತಿಂಗಳು ಅವಂತಿಸುಂದರೀ ಕಥೆಯ ಕನ್ನಡ ಅನುವಾದವನ್ನು ಸರಣಿ ರೂಪದಲ್ಲಿ ಬರೆಯುತ್ತಿದ್ದರು. ಈ ಪುಸ್ತಕವು ಅದರ ಸಂಗ್ರಹವಾಗಿದೆ. ೧೯೫೭ರಲ್ಲಿ ಪ್ರಕಟವಾದ **The Journal of Oriental Research, Madras** ನಲ್ಲಿ ಶ್ರೀ ಹರಿಹರ ಶಾಸ್ತ್ರಿ ಅವರು ಅವಂತಿ ಸುಂದರೀ ಕಥಾ ಸಾರ ಮತ್ತು ಅವಂತಿ ಸುಂದರೀ ಎಂಬ ಕಾವ್ಯಗಳ ಸಾರಾಂಶವನ್ನು ಆಂಗ್ಲ ಭಾಷೆಯಲ್ಲಿ ಬರೆದಿದ್ದನ್ನು ನಮ್ಮ ತಂದೆಯವರು ಕನ್ನಡಕ್ಕೆ ಅನುವಾದಿಸಿದರು. ಆದರೆ ಅದು ಅಸಂಪೂರ್ಣವಾಗಿ ಉಳಿದಿದೆ. ಅದೇ ಸಮಯಕ್ಕೆ ಅವರ ತೀರ್ಥರೂಪರು ಅನಾರೋಗ್ಯದಿಂದ ನರಳುತ್ತಿದ್ದರು; ಕ್ಯಾಲಿಸನ್ ಕಾಲೇಜ್ ಆ ವರ್ಷದಲ್ಲೇ ಪ್ರಾರಂಭವಾಗಿ ಅವರು ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿದ್ದು, ಕೆಲಸದ ಒತ್ತಡದಿಂದಲೋ ಏನೊ ಈ ಮಾಲೆಯನ್ನು ಮುಂದುವರಿಸಲಿಲ್ಲವೆಂದು ತೋರುತ್ತದೆ.

ದಂಡಿಯ ವಿಚಾರ

ದಂಡಿಯ ಜೀವನಚರಿತ್ರೆಯ ಬಗ್ಗೆ, ಅವನ ಕೃತಿಗಳ ಬಗ್ಗೆ ವಿದ್ವಾಂಸರಾದ ಎಮ್. ಆರ್. ಕಾಲೇ[೧], ಜಿ. ಹರಿಹರ ಶಾಸ್ತ್ರಿ[೨], ಎಮ್. ಎನ್. ಶ್ರೀನಿವಾಸೈಯ್ಯಂಗಾರ್[೩], ಆಚಾರ್ಯ ಬಲದೇವ ಉಪಾಧ್ಯಾಯ[೪] ಮತ್ತು

---

೧. M. R. Kale, Dasakumaracarita of Dandin, Motilal Banarasidass, 2003, (reprint).

೨. G. Harihara Sastri, The Journal of Oriental Research, Madras, 1957.

೩. ಎಂ. ಎನ್. ಶ್ರೀನಿವಾಸ ಅಯ್ಯಂಗಾರ್, ಸಂಸ್ಕೃತ ಕವಿ ಚರಿತ್ರೆ, ಸಂಪುಟ ೧, ಬೆಂಗಳೂರು, ೧೯೭೬.

೪. ಆಚಾರ್ಯ ಬಲದೇವ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯದ ಇತಿಹಾಸ, ಅನು: ಎಸ್. ರಾಮಚಂದ್ರಶಾಸ್ತ್ರಿ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೦.

ಎಮ್. ಕೃಷ್ಣಮಾಚಾರ್ಯರ್[೫] ಅವರ ಪುಸ್ತಕಗಳನ್ನು ಹಾಗೂ ಲೇಖನಗಳನ್ನು ಪರಿಶೀಲಿಸಿದ ನಂತರ ಕೆಲವು ಸಂಗತಿಗಳು ಸ್ವಲ್ಪಮಟ್ಟಿಗಾದರೂ ಸ್ಪಷ್ಟವಾಗುತ್ತವೆ:

★ ದಂಡಿಯ ಕಾಲನಿರ್ಣಯ (ಏಳನೆಯ ಶತಮಾನದ ಕೊನೆಯ ಭಾಗ) ಮತ್ತು ಅವನು ಯಾವ ಪ್ರಾಂತ್ಯದವನು (ದಕ್ಷಿಣಾತ್ಯನಾಗಿ ಕಾಂಚಿಪುರಂ ನಲ್ಲಿ ನೆಲೆಸಿರಬಹುದು) ಎಂಬುದು ತಿಳಿದಿದ್ದು ೧೯೨೪ರ ನಂತರ. ೧೯೧೬ ಯಲ್ಲಿ ಶ್ರೀ ಎಮ್. ಆರ್. ಕವಿ ಎಂಬ ವಿದ್ವಾಂಸರಿಗೆ ಒಂದು ತುಂಡಾದ ಅಸಂಪೂರ್ಣವಾದ ಅವಂತಿಸುಂದರೀಕಥೆ ಎಂಬ ಗದ್ಯಕಾವ್ಯದ ಹಸ್ತಪ್ರತಿ ದೊರೆಕಿತು. ಅದನ್ನು ಮತ್ತು ಆದರ ಸಂಗ್ರಹವಾದ ಇನ್ನೊಂದು ಛಂದೋಬದ್ಧವಾದ ಕೃತಿ ಅವಂತೀಸುಂದರೀ ಕಥಾ ಸಾರವನ್ನು ೧೯೨೪ರಲ್ಲಿ ಅವರು ಸಂಪಾದಿಸಿ ಪ್ರಕಟಿಸಿದರು. (ಸರ್ಕಾರಿ ಪ್ರಾಚ್ಯಗ್ರಂಥಾಲಯ, ಚೆನ್ನೈ). ೧೯೨೫ರಲ್ಲಿ ಜಿ. ಹರಿಹರ ಶಾಸ್ತ್ರಿಗಳಿಗೆ ಕೇರಳದ ಒಂದು ಗ್ರಾಮದಲ್ಲಿ ಅವಂತಿಸುಂದರೀ ಕಥೆಯ ವಿಸ್ತಾರವಾದ ಇನ್ನೊಂದು ಹಸ್ತಪ್ರತಿಯು ದೊರಕಿ, ೧೯೫೭ರಲ್ಲಿ **The Journal of Oriental Research, Madras,** ನಲ್ಲಿ ಪ್ರಕಟಿಸಿದರು. ಈ ಪ್ರಕಟಣೆಗಳು ದಂಡಿಯ ಜೀವನಚರಿತ್ರೆಯ ಬಗ್ಗೆ ಹೊಸ ಬೆಳಕು ಚೆಲ್ಲುತ್ತದೆ.

★ ದಶಕುಮಾರಚರಿತೆ ಎಂಬ ಗದ್ಯ ಕಾವ್ಯದ ಉಲ್ಲೇಖವು ಯಾವ ಅಲಂಕಾರಗ್ರಂಥದಲ್ಲಿಯೂ, ಯಾವ ವ್ಯಾಖ್ಯಾಗ್ರಂಥದಲ್ಲಿಯೂ ಕಾಣದು; ಮತ್ತೆ ೧೦ನೆ ಶತಮಾನದ ಪೂರ್ವದಲ್ಲಿ ರಚಿಸಿರುವ ಯಾವ ಕೃತಿಯಲ್ಲಿಯೂ ಅದರ ಹೆಸರು ನಿರ್ದೇಶಿಸಿಲ್ಲ. ಕೆಲ ವಿದ್ವಾಂಸರ ಪ್ರಕಾರ ಮೂಲ ಗ್ರಂಥವು ಕೇತನ ಎಂಬ ಕವಿಯಿಂದ ತೆಲುಗು ಭಾಷೆಗೆ ೧೩ ರನೆ ಶತಮಾನದಲ್ಲಿ ಭಾಷಾಂತರವಾಗಿ ಯಾವನೋ ಬೇರೆ ವಿದ್ವಾಂಸನಿಂದ ಸಂಸ್ಕೃತಕ್ಕೆ ಮರು ಭಾಷಾಂತರವಾಗಿರಬಹುದು.

ದಶಕುಮಾರಚರಿತೆಯು ಅವಂತಿಸುಂದರೀ ಕಥೆಯ ಸಂಗ್ರಹವಾಗಿದ್ದು ಅದರಲ್ಲಿ ಮೂರು ಭಾಗಗಳು ಕಂಡು ಬರುತ್ತವೆ: ಪೂರ್ವ ಭಾಗ ಅಥವ

---

೫. M. Krishnamachariar, History of Classical Sanskrit Literature, TTD, 1937.

ಪೂರ್ವ ಪೀಠಿಕೆ, ಮೂಲ ಗ್ರಂಥ ಮತ್ತು ಉತ್ತರ ಭಾಗ. ಈ ಮೂರು ಭಾಗಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದಿರುವುದು, ಮತ್ತು ಪೂರ್ವ ಪೀಠಿಕೆಯು ರಚಿತವಾದ ಶೈಲಿ ಅಷ್ಟು ಸೊಗಸಾಗಿರದಿರುವುದು ಗಮನಾರ್ಹ. ಪೂರ್ವಪೀಠಿಕೆಗೆ ಪುರಾತನ ವ್ಯಾಖ್ಯಾನಗಳು ರಚಿಸಲ್ಪಟ್ಟಿಲ್ಲ. ದಶಕುಮಾರ ಚರಿತೆಯಲ್ಲಿ ಅಶ್ಲೀಲ ಹಾಗು ಗ್ರಾಮ್ಯ ಚಾಟೂಕ್ತಿಗಳು ಕಂಡು ಬಂದು, ಶ್ರೀ ಶ್ರೀನಿವಾಸೈಯ್ಯಂಗಾರ್‌ರ ಪ್ರಕಾರ ಕಾವ್ಯಾದರ್ಶನದಂತಹ ಉತ್ತಮ ಅಲಂಕಾರ ಗ್ರಂಥವನ್ನು ರಚಿಸಿದ ವ್ಯಕ್ತಿ ಈ ವಾಕ್ಯಗಳನ್ನು ಬರೆದಿರುವುದು ಅಸಂಭವ. ಪೂರ್ವ ಭಾಗವು ಅಷ್ಟು ಉದಾತ್ತವಾದ ಕೃತಿ ಎಂದು ಕಂಡು ಬರುವುದಿಲ್ಲ. ಈ ಕೃತಿಯನ್ನು ಮತ್ತು ಅವಂತಿಸುಂದರೀ ಕಥೆಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದರೆ ಅವಂತಿಸುಂದರೀ ಕಥೆಯೇ ದಂಡಿಯ ಮೌಲಿಕ ಗ್ರಂಥವೆಂದು ತಿಳಿಯುತ್ತದೆ.

ಅವಂತಿಸುಂದರೀ ಕಥಾ ಕಾವ್ಯವು ಈಗಲೂ ಉಪಲಬ್ಧವಿಲ್ಲ. ಆದರೆ ಕುಮಟಾದ ಡಾ|| ಎ. ವಿ. ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಮಹೇಶ್ ಅಡಕೋಳಿ ಮತ್ತು ನಮ್ಮ ತಂದೆಯವರ ಶಿಷ್ಯರಾದ ಶ್ರೀ ಎಸ್. ಸೂರ್ಯಪ್ರಕಾಶ್ ಪಂಡಿತ್ ಅವರ ಸೌಜನ್ಯದಿಂದ ೧೯೬೪ರಲ್ಲಿ ಅನಂತಶಯನ ವಿಶ್ವವಿದ್ಯಾಲಯದವರು ಪ್ರಕಟ ಮಾಡಿದ ಮೂಲ ಪ್ರತಿಯು ದೊರೆಕಿತು. ಇವರಿಬ್ಬರಿಗೂ ನಾನು ಆಭಾರಿಯಾಗಿದ್ದೇನೆ. ದಂಡಿಯು ರಚಿಸಿದ ಈ ಅವಂತಿಸುಂದರೀ ಕಾವ್ಯರಚನೆಯ ಶೈಲಿಯನ್ನು ಪರಿಚಯಿಸುವುದಕ್ಕಾಗಿ ಮೂಲ ಕೃತಿಯಿಂದ ಕೆಲವು ಪುಟಗಳನ್ನು ಮುದ್ರಿಸಲಾಗಿದೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ವಾಗರ್ಥ ಅವರಿಗೆ ನಮ್ಮ ಸ್ಮಾರಕ ನಿಧಿಯ ಪರವಾಗಿ ನಾನು ವಂದನೆಗಳನ್ನು ಅರ್ಪಿಸುತ್ತೇನೆ.

ಗುರುಪೂರ್ಣಿಮಾ | ಸಾ. ರಾ. ಸುದರ್ಶನ
ಸರ್ವಧಾರಿ ಸಂವತ್ಸರ

ಲೇಖಕರ ಪರಿಚಯ



ಪ್ರೊ. ಸಾ.ಕೃ. ರಾಮಚಂದ್ರರಾಯರು (1925-2006) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕ್ಯಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರಾದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆ ಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಪೀಠಿಕೆ

ಸಂಸ್ಕೃತ ವಾಙ್ಮಯದಲ್ಲಿ ಆಚಾರ್ಯ ದಂಡಿಯ ಪ್ರತಿಭೆಯನ್ನು ಮೆಚ್ಚಿಕೊಂಡ ರಸಿಕರು ಒಂದು ಕವಿ ಸಮಯವನ್ನು ಸೃಷ್ಟಿಸಿದರು. ಒಮ್ಮೆ ಕಾಳಿದಾಸನಿಗೂ ದಂಡಿಗೂ ಯಾರು ನಿಜವಾದ ಕವಿಯೆಂದು ವಿವಾದ ಒದಗಿತಂತೆ. ಆಗ ಸರಸ್ವತಿಯೇ ಬಂದು 'ಕವಿರ್ದಂಡೀ ಕವಿರ್ದಂಡೀ ಕವಿರ್ದಂಡೀ ನ ಸಂಶಯಃ' ಎಂದು ಮೂರು ಬಾರಿ ಹೇಳಿ ಶಪಥ ಮಾಡಿದಳಂತೆ. ಅನಂತರ ಕಾಳಿದಾಸನನ್ನು 'ತ್ವಮೇವಾಹಂ' ಎಂದು ಹೇಳಿ ಸಮಾಧಾನಪಡಿಸಿದವಳೂ ಅವಳೇ ಎನ್ನಿ! ಅಂತೂ ದಂಡಿಯ ಮೇಲ್ಮೆಯನ್ನು ನಮ್ಮವರು ಒಪ್ಪಿಕೊಂಡರು. ಜಗತ್ತಿನಲ್ಲಿ ವಾಲ್ಮೀಕಿ ಹುಟ್ಟಿದಾಗಲೇ 'ಕವಿ' ಎನ್ನುವ ಮಾತು ಬಳಕೆಗೆ ಬಂದಿತು ; ವ್ಯಾಸ ಹುಟ್ಟಿದಾಗ 'ಕವಿ' ಶಬ್ಧದ ದ್ವಿವಚನ ಬಳಕೆಗೆ ಬಂದಿತು ; ದಂಡಿ ಹುಟ್ಟಿದಾಗ 'ಕವಿಗಳು' ಎಂಬ ಬಹುವಚನ ಪ್ರಯೋಗ ಸಿದ್ಧವಾಯಿತು– ಇದು ಇನ್ನೊಂದು ಕವಿ ಸಮಯ. ಕಾಳಿದಾಸ ಉಪಮೆಗೆ ಪ್ರಸಿದ್ಧನಾದರೆ, ಭಾರವಿ ಅರ್ಥ ಗೌರವಕ್ಕೆ ಪ್ರಸಿದ್ಧನಾದರೆ, ದಂಡಿ ಪದಲಾಲಿತ್ಯಕ್ಕೆ ಪ್ರಸಿದ್ಧ. ಕನ್ನಡ ನಾಡಿನ ಸಂಸ್ಕೃತ ಕವಯಿತ್ರಿಯರಲ್ಲಿ ಹೆಸರಾಂತ ಗಂಗಾದೇವಿ (1360ರ ಸುಮಾರು) ದಂಡಿಯ ಮಾತು ಅಮೃತದಲ್ಲಿ ಅದ್ದಿದ ಮಾತು, ಸರಸ್ವತಿಗೆ ಕೈಗನ್ನಡಿಯಂತಿರುವ ಮಾತು ಎಂದು ಹೊಗಳಿದ್ದಾಳೆ.

ಚಾಳುಕ್ಯ ರಾಜನಾದ ಇಮ್ಮಡಿ ಪುಲಿಕೇಶಿಯ ಮಗ ಒಂದನೇಯ ವಿಕ್ರಮಾದಿತ್ಯನು ಪಲ್ಲವರ ರಾಜಧಾನಿಯಾಗಿದ್ದ ಕಾಂಚೀಪುರವನ್ನು ಕ್ರಿಸ್ತಾಬ್ಧ 655ರಲ್ಲಿ ದಾಳಿ ಮಾಡಿದಾಗ ದಂಡಿಯು ಅಲ್ಲಿಯೇ ಇದ್ದವನು. ಮುಂದೆ ಪಲ್ಲವರಾಜ ನರಸಿಂಹವರ್ಮನು (630 – 668) ಕಾಂಚೀಪುರವನ್ನು ಮತ್ತೆ

ವಶಪಡಿಸಿಕೊಂಡಂದು ದಂಡಿಯನ್ನು ತುಂಬಿದ ಸಭೆಯಲ್ಲಿ ಸನ್ಮಾನಿಸಿದಂತೆ. ಈ ನರಸಿಂಹವರ್ಮನೇ ಮಹಾಮಲ್ಲನೆಂದು ಪ್ರಖ್ಯಾತನಾದವನು, ಕಡಲ ತೀರದ ಅದ್ಭುತ ದೇಗುಲಗಳಿರುವ ಮಾಮಲ್ಲಪುರದ ಹೆಸರು ಅವನಿಂದಲೇ ಬಂದುದು; ಆ ದೇಗುಲಗಳೂ ಅವನಿಂದಲೇ ಬಂದವು. ನರಸಿಂಹ ವರ್ಮನ ತಾತ ಸಿಂಹ ವಿಷ್ಣು (575-600) ಸಾಹಸಿ, ಸಾಹಿತಿ, ಕವಿಮಿತ್ರ, ದಂಡಿಯ ತಾತ ದಾಮೋದರನನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಂಡು ಸನ್ಮಾನಿಸದ್ದವನು. ಅಂದಿನಿಂದ, ದಂಡಿಯ ಮನೆ ಕಾಂಚೀಪುರದಲ್ಲಿಯೇ ಇದ್ದಿತು. ದಾಮೋದರನನ್ನು ಸಿಂಹವಿಷ್ಣು ಕಾಂಚೀಪುರಕ್ಕೆ ಕರೆಸಿಕೊಂಡ ಪ್ರಸಂಗದಿಂದಲೇ ದಂಡಿಯ ಅವಂತಿ ಸುಂದರೀ ಕಥೆ ಆರಂಭವಾಗುತ್ತದೆ.

ನರಸಿಂಹವರ್ಮನ ಕಾಲದಲ್ಲಿದ್ದ ದಂಡಿಯು ಮಾಮಲ್ಲಪುರದ ದೇಗುಲಗಳ ನಿರ್ಮಾಣದಲ್ಲಿ ಪಾಲ್ಗೊಂಡವನು. ಆದರೆ ಅವನ ಯಶಸ್ಸು ಕಾವ್ಯಗಳನ್ನು ಆಶ್ರಯಿಸಿ ನಿಂತಿದೆ. ದಂಡಿಯು ಮೂರುಕಾವ್ಯಗಳನ್ನು ಬರೆದಂತೆ ಬಳಕೆಯ ಮಾತುಂಟು. ಮಹಾಕವಿ ರಾಜಶೇಖರನು ಮೂರು ವೇದಗಳಂತೆ, ಮೂರು ಅಗ್ನಿಗಳಂತೆ, ಮೂವರು ದೇವತೆಗಳಂತೆ, ಮೂರು ಗುಣಗಳಂತೆ ದಂಡಿಯ ಮೂರು ಪ್ರಬಂಧ ಗಳು ಮೂರು ಲೋಕಗಳಲ್ಲಿ ವಿಖ್ಯಾತವಾದುವು ಎನ್ನುವ ಮಾತನ್ನಾಡಿದ್ದಾನೆ. ಈ ಮೂರು ಪ್ರಬಂಧಗಳಲ್ಲಿ ನಿರ್ವಿವಾದವಾದ ಒಂದೆಂದರೆ *ಕಾವ್ಯಾದರ್ಶ*ವೆನ್ನುವ ಅಲಂಕಾರ ಗ್ರಂಥ. ದಂಡಿಯ ಹೆಸರಿನಲ್ಲಿ ಪ್ರಸಿದ್ಧವಾಗಿರುವ ದಶಕುಮಾರ ಚರಿತೆ ಯನ್ನು ಒಳಗೊಂಡ *ಅವಂತಿ ಸುಂದರೀ ಕಥೆ* ಇನ್ನೊಂದೆಂದು ಈಚೆಗೆ ಸಿದ್ಧವಾಗಿದೆ. ರಾಮಾಯಣ - ಮಹಾಭಾರತ ಗಳನ್ನು ಒಟ್ಟಿಗೆ ಹೇಳುವ ಚಮತ್ಕಾರದ *ದ್ವಿಸಂಧಾನ ಕಾವ್ಯ*ವೊಂದು ಮೂರನೆಯದೆಂದು ಪ್ರತೀತಿ. ಆದರೆ ಈ ಕಾವ್ಯ ಇಂದು ಉಪಲಬ್ಧವಿಲ್ಲ.

ಅವಂತಿ ಸುಂದರೀ ಕಥೆಯನ್ನು 1924ರಲ್ಲಿ ಮಾನವಲ್ಲಿ ರಾಮಕೃಷ್ಣ ಕವಿಯೆಂಬ ಪಂಡಿತರು ಸಂಶೋಧನೆಮಾಡಿ ಹೊರ ತೆಗೆದು ಪ್ರಕಟಿಸಿದರು. ಆ

ಮೊದಲೇ ಆಖ್ಯಾಯಿಕೆಗೆ ನಿದರ್ಶನವಾಗಿ ಕಾದಂಬರೀ ಮತ್ತು ಅವಂತಿಸುಂದರೀ ಕಥೆಗಳನ್ನು ಪೂರ್ವಿಕರು ಉದಹರಿಸುತ್ತಿದ್ದರು. ಆದರೆ ಗ್ರಂಥ ದೊರೆತಿರಲಿಲ್ಲ. ದಕ್ಷಿಣ ದೇಶದಲ್ಲಿ ಈ ಕಾವ್ಯದ ಮೂಲ ಮಾತೃಕೆಗಳು ದೊರೆತಾಗ ಇದು ದಶ ಕುಮಾರ ಚರಿತೆ ಯನ್ನೊಳಗೊಂಡ ಸುದೀರ್ಘ ಗದ್ಯ ಗ್ರಂಥವೆಂಬುದು ಸ್ಪಷ್ಟವಾಯಿತು. ಜಿ. ಹರಿಹರ ಶಾಸ್ತ್ರಿಗಳು ಉತ್ತರ ತಿರುವಾಂಕೂರಿನ ಮುವತ್ತುಪುಳ ಎಂಬಲ್ಲಿ ನಂಬೂದಿರಿಯೊಬ್ಬರ ಮನೆಯಲ್ಲಿ ಸಂಪಾದಿಸಿದ ಅವಂತಿ ಸುಂದರೀ ಕಥಾಸಾರ ವೆಂಬ ಮಲೆಯಾಳ ಲಿಪಿಯ ಪದ್ಯಗ್ರಂಥವನ್ನು ಮದ್ರಾಸಿನ ಕುಪ್ಪುಸ್ವಾಮಿ ಶಾಸ್ತ್ರಿಸಂಶೋಧನ ಮಂದಿರದಿಂದ 1957ರಲ್ಲಿ ಪ್ರಕಟಿಸಿದ್ದಾರೆ. ಇದರ ಆಧಾರದಮೇಲೆ ದಂಡಿಯ ಅವಂತಿ ಸುಂದರೀ ಕಥೆಯನ್ನು ಇಲ್ಲಿ ಹೆಣೆದಿದೆ.

ದಂಡಿಯ ಪೂರ್ವಜರು

ಆಗಸ್ತ್ಯರ ಪಾದಧೂಳಿಯಿಂದ ಪವಿತ್ರವಾದ ದಕ್ಷಿಣಾಪಥದಲ್ಲಿ ಕಾಂಚೀಪುರದಂಥ ಪಟ್ಟಣ ಇನ್ನೊಂದಿಲ್ಲ. ಪಲ್ಲವರಾಜನಾದ ಸಿಂಹವಿಷ್ಣು ಅಲ್ಲಿ ರಾಜ್ಯವಾಳುತ್ತಿದ್ದಾಗ ನಡೆದ ಪ್ರಸಂಗ ಇದು. ಈ ರಾಜನಿಗೆ ಕದನ - ಕರ್ಮವ್ಯಾಪೃತ, ಮಲಯಮಥನ, ಅವನಿಸಿಂಹ, ಮೊದಲಾದ ಬಿರುದುಗಳಿದ್ದವು. ಅವನು ಎಷ್ಟು ಪರಾಕ್ರಮಶಾಲಿಯೋ ಅಷ್ಟೇ ಕಲಾಕುಶಲ, ಎಷ್ಟು ಸಾಹಸಿಯೋ ಅಷ್ಟೇ ವಿದ್ಯಾಪಕ್ಷಪಾತಿ.

ಒಂದು ದಿನ ಅವನು ಒಡ್ಡೋಲಗದಲ್ಲಿ ಕುಳಿತಿದ್ದಾಗ ಇದ್ದಕ್ಕಿದ್ದಂತೆ, ಗಂಧರ್ವನೊಬ್ಬನು ಅವನ ಮುಂದೆ ಕಾಣಿಸಿಕೊಂಡು, ವೀಣೆಯನ್ನು ನುಡಿಸುತ್ತ ಆರ್ಯಾವೃತ್ತದ ಶ್ಲೋಕವೊಂದನ್ನು ಹಾಡಿದನು. ವೀಣೆಯ ಬೆಡಗು, ಹಾಡಿನ ಸೊಗಸು ರಾಜನ ಹೃದಯವನ್ನು ಸೆಳೆದವು. ಇಂಥ ಮಧುರವಾದ ಗಾಯನವನ್ನಾಗಲೀ, ಇಷ್ಟು ಸುಂದರವಾದ ಗೀತವನ್ನಾಗಲೀ ಅವನು ಆ ಮೊದಲು ಕೇಳಿರಲಿಲ್ಲ. ರಾಜನು ಗಂಧರ್ವನನ್ನು ಈ ಗೀತವನ್ನು ರಚಿಸಿದವನು ಯಾವ ಕವಿಯೆಂದು ಕೇಳಲು ಗಂಧರ್ವ 'ಅರಸನೇ, ಆರ್ಯದೇಶದ ವಾಯುವ್ಯ ಕೋಣೆಯಲ್ಲಿ ಅನರ್ತವೆನ್ನುವ ಪ್ರಾಂತ್ಯವಿದೆ. ಅಲ್ಲಿ ಆನಂದಪುರವೆನ್ನುವ ನಗರ ಉಂಟು. ಅಲ್ಲಿದ್ದ ಕೌಶಿಕ ಗೋತ್ರದ ಕೆಲವು ಬ್ರಾಹ್ಮಣರ ಮನೆತನಗಳು ಅಲ್ಲಿಂದ ಹೊರಹೊರಟು ನಾಸಿಕದ ಬಳಿಯಿರುವ ಅಚಲಪುರಕ್ಕೆ ವಲಸೆ ಬಂದರು. ಮೂಲದೇವನೆಂಬ ರಾಜ ತನ್ನ ಸ್ನೇಹಿತ ಅಚಲನೆನ್ನುವವನಿಗಾಗಿ ಕಟ್ಟಿಸಿಕೊಟ್ಟ ಊರು ಇದು.

ಹಾಗೆ ವಲಸೆ ಬಂದವರಲ್ಲಿ ನಾರಾಯಣಸ್ವಾಮಿ ಎನ್ನುವ ಗೃಹಸ್ಥನಿಗೆ ದಾಮೋದರನೆನ್ನುವ ಮಗನಿದ್ದಾನೆ. ಸಣ್ಣವನಿದ್ದಾಗಲೇ ಅವನ ಕವಿ ಪ್ರತಿಭೆ ಆ ಕಡೆಯೆಲ್ಲ ಪ್ರಸಿದ್ಧವಾಯಿತು. ಇವನ ವರ್ಚಸ್ಸನ್ನು ಮೆಚ್ಚಿಕೊಂಡವರಲ್ಲಿ ಮಹಾಕವಿ ಭಾರವಿಯೊಬ್ಬನು. ಭಾರವಿ ತನಗೆ ಆಶ್ರಯದಾತನಾಗಿದ್ದ ವಿಷ್ಣುವರ್ಧನ ರಾಜನ ಬಳಿ ಈ ದಾಮೋದರನನ್ನು ಕೊಂಡೊಯ್ದು ಅವನ ಕೀರ್ತಿಯನ್ನು ಹಾಡಿದನು. ವಿಷ್ಣುವರ್ಧನನೂ ಕಿರಿಯ ಕವಿಯನ್ನು ವಾತ್ಸಲ್ಯದಿಂದ ಕಂಡು ಸನ್ಮಾನಿಸಿದನು. ಬರುಬರುತ್ತ ಇಬ್ಬರ ನಡುವೆ ಗಾಢವಾದ ಮೈತ್ರಿ ಬೆಳೆಯಿತು. ಯಾವಾಗಲೂ ಎಡೆಬಿಡದೆ ಇರುತ್ತಿದ್ದರು.

ಒಂದು ದಿನ ರಾಜ ತನ್ನ ಮಿತ್ರನೊಂದಿಗೆ ಬೇಟೆಯಾಡಲು ಕಾಡಿಗೆ ಹೊರಟ, ಮೃಗವೊಂದನ್ನು ಅರಸಿಕೊಂಡು ಬಹುದೂರ ಅಲೆದಾಡಿದರು; ಇಬ್ಬರಿಗೂ ತಡೆಯಲಾರದಷ್ಟು ಹಸಿವೆ, ನೀರಡಿಕೆ ಆಯಿತು. ಆಗ ಅವರಿಗೆ ದೊರೆತುದು ಮಾಂಸವಷ್ಟೇ. ರಾಜನೇನೋ ಕ್ಷತ್ರಿಯ: ಮಾಂಸವನ್ನು ತಿಂದ. ದಾಮೋದರ ಬ್ರಾಹ್ಮಣನಲ್ಲವೇ ? ಮಾಂಸ ಭಕ್ಷಣ ಅವನಿಗೆ ನಿಷಿದ್ಧವಾದುದಲ್ಲವೇ ? ಆದರೆ ಹಸಿವೆಯ ಮುಂದೆ ಶಾಸ್ತ್ರದ ವಿಧಿ ನಿಷೇಧಗಳನ್ನು ನಿಲ್ಲಲಿಲ್ಲ. ಜೀವ ಉಳಿಸಿಕೊಳ್ಳಲು ಮಾಂಸವನ್ನು ತಿನ್ನಲೇ ಬೇಕಾಯಿತು. ಆದರೆ ಈ ತಪ್ಪಿಗೆ ಪ್ರಾಯಶ್ಚಿತ್ತವಾಗಿ ದಾಮೋದರ ತೀರ್ಥಯಾತ್ರೆಗೆ ಹೊರಟ.

ತೀರ್ಥಯಾತ್ರೆಯ ನೆಪದಿಂದ ದಾಮೋದರ ದಕ್ಷಿಣ ಭಾರತದ ಪುಣ್ಯಕ್ಷೇತ್ರಗಳನ್ನೆಲ್ಲ ಸಂದರ್ಶಿಸುತ್ತ ಕರ್ನಾಟಕಕ್ಕೆ ಬಂದು ಇಲ್ಲಿ ಗಂಗರಾಜನಾದ ದುರ್ವಿನೀತನ ರಾಜಧಾನಿಯಾಗಿದ್ದ ಕುವಲಾಲ (ಕೋಲಾರ)ಕ್ಕೆ ಬಂದನು. ನಂದಗಿರಿನಾಥರಾದ ಗಂಗರಾಜರಲ್ಲಿ ಅವಿನೀತ, ದುರ್ವಿನೀತ ಇಬ್ಬರೂ ವಿದ್ಯಾಪಕ್ಷಪಾತಿಗಳು ಮಾತ್ರವಲ್ಲದೇ, ಸ್ವತಃ ವಿದ್ವಾಂಸರು. ದಾಮೋದರನ ಪಾಂಡಿತ್ಯವನ್ನು ದುರ್ವಿನೀತ ರಾಜ ಮೆಚ್ಚಿಕೊಂಡು ಅವನನ್ನು ತನ್ನ

ಆಸ್ಥಾನದಲ್ಲಿಯೇ ಇರಿಸಿಕೊಂಡ. "ನಾನು ಹಾಡಿದ ಆರ್ಯಾವೃತ್ತದ ಗೀತವನ್ನು ರಚಿಸಿದ ಕವಿ ಇವನೇ. ಈಗಲೂ ಅದೇ ಗಂಗರಾಜನ ಆಸ್ಥಾನದಲ್ಲಿದ್ದಾನೆ."

ಗಂಧರ್ವ ಹೀಗೆ ಹೇಳಿ ಮರೆಯಾದ. ಪಲ್ಲವ ರಾಜನಿಗೆ ಈ ಗೀತೆಯನ್ನು ರಚಿಸಿದ ಕವಿಯನ್ನು ಕಾಣಲೇಬೇಕೆಂಬ ಬಯಕೆಯಾಯಿತು. ಬಯಕೆ ಬೇರೂರಿ, ಸಿಂಹವಿಷ್ಣು ಗಂಗರಾಜನಿಗೆ ಮತ್ತೆ ಮತ್ತೆ ನಿರೂಪವನ್ನು ಕಳುಹಿಸಿ, ಕಡೆಗೆ ದಾಮೋದರನನ್ನು ಕರಸಿಕೊಂಡ. ಅವನನ್ನು ಬಹುವಾಗಿ ಸನ್ಮಾನಿಸಿ ಅವನಿಂದ ಅನೇಕ ಗ್ರಂಥಗಳನ್ನು ಬರೆಸಿದ. ಸಂಸ್ಕೃತ ಮತ್ತು ಪ್ರಾಕೃತ ಅಲಂಕಾರ ಗ್ರಂಥಗಳನ್ನೂ "ಗಂಧಮಾದನ "ಎಂಬ ಕಾವ್ಯವನ್ನೂ ದಾಮೋದರ ಬರೆದನು.

ಪಲ್ಲವ ರಾಜನ ಆಶ್ರಯದಲ್ಲಿಯೇ ನಿಂತ ದಾಮೋದರನು ಅಲ್ಲಿಯೇ ಮದುವೆಯಾಗಿ ಮೂವರು ಮಕ್ಕಳನ್ನು ಪಡೆದನು. ಮೊದಲನೆಯವನು ಸಿಂಹವಿಷ್ಣು, ಎರಡನೆಯವನು ಮನೋರಥ, ಮೂರನೆಯವನು ಅತಿಲೋಭ. ಕಾಲಕ್ರಮದಲ್ಲಿ ಎರಡನೆಯ ಮಗನಿಗೆ ದಾಮೋದರ, ಭವದಾಸ, ಸಿಂಹವಿಷ್ಣು ಮತ್ತು ವೀರದತ್ತ ಎನ್ನುವ ನಾಲ್ಕು ಮಕ್ಕಳಾದರು. ಕಡೆಯ ಮಗನಾದ ವೀರದತ್ತನು ಮಾಠರಗೋತ್ರದ ಗೌರಿ ಎನ್ನುವವಳನ್ನು ಮದುವೆಯಾಗಿ ಹಲವಾರು ಹೆಣ್ಣು ಮಕ್ಕಳನ್ನು ಪಡೆದನು. ಅವರೆಲ್ಲರಿಗೂ ಕಿರಿಯನಾಗಿ, ವೀರದತ್ತ - ಗೌರಿಯರ ಒಬ್ಬನೇ ಮಗನಾಗಿ, ದಂಡಿ ಹುಟ್ಟಿದನು.

ದಂಡಿ

ದಂಡಿ ಏಳು ವರ್ಷದವನಿದ್ದಾಗ ತಾಯಿ ತೀರಿಕೊಂಡಳು. ಈ ಹುಡುಗನನ್ನು ವಿದ್ಯಾಧಿದೇವತೆಯಾದ ಸರಸ್ವತಿಯೇ ಸಲಹಿದಳು. ಮರು ವರ್ಷ ಹುಡುಗನಿಗೆ ಉಪನಯನವಾದನಂತರ ತಂದೆಯೂ ತೀರಿಕೊಂಡನು. ಈ ಸಮಯಕ್ಕೆ ಸರಿಯಾಗಿ ದೇಶವನ್ನು ಶತ್ರುಗಳು ದಾಳಿ ಮಾಡಿ, ಜನಜೀವನದ ನೆಮ್ಮದಿಯನ್ನು ಕದಡಿದರು. ಈ ದಾಳಿಯ ಬೆನ್ನಿನಲ್ಲೇ ಬರಗಾಲವೂ ಎರಗಿ ಬಂದು ದಂಡಿಯ ಮನೆಯವರೆಲ್ಲ ಸಾವಿಗೆ ತುತ್ತಾದರು. ಶತ್ರುಗಳ ಕಾಟಕ್ಕೆ ಹೆದರಿ ದಂಡಿಯು ಊರು ಬಿಟ್ಟು ಊರೂರು ಅಲೆಯತೊಡಗಿದನು. ಅವನಲ್ಲಿ ವಿದ್ಯಾಕಾಂಕ್ಷೆ ಬಲವಾಗಿದ್ದುದರಿಂದ ಪ್ರಸಿದ್ಧವಾದ ವಿದ್ಯಾಕ್ಷೇತ್ರಗಳಲ್ಲಿ ದಂಡಿ ವಿದ್ಯಾರ್ಜನೆ ಮಾಡಿ ಅಸಮ ವಿದ್ವಾಂಸನಾದನು.

ನರಸಿಂಹವರ್ಮ ರಾಜನು ಶತ್ರುಗಳನ್ನು ಹೊಡೆದೋಡಿಸಿ ಕಾಂಚೀಪುರವನ್ನು ಮತ್ತೆ ವಶಪಡಿಸಿಕೊಂಡಂದು ದಂಡಿಯೂ ಮಾಮಲ್ಲಪುರಕ್ಕೆ ಬೇಟಿನೀಡಿ ಹಿಂದಿರುಗಿ, ರಾಜ ಸನ್ಮಾನವನ್ನು ಪಡೆದು ಸುಖವಾಗಿ ಇರುತ್ತಿದ್ದನು. ಆಗ ಆ ನಗರದಲ್ಲಿ ಮಾಂಧಾತನ ಮಗ ಲಲಿತಾದಿತ್ಯ ಎಂಬ ಶಿಲ್ಪಿ ಇದ್ದನು. ತೊಂಬತ್ತಾರು ಬಗೆಯ ಪ್ರಾಸಾದಗಳನ್ನೂ, ಆರು ಬಗೆಯ ಯಂತ್ರಗಳನ್ನೂ ನಿರ್ಮಿಸುವುದರಲ್ಲಿ ನಿಪುಣ ಅವನು; ಶಿಲ್ಪಿಗಳ ಆಚಾರ್ಯನಿಗೆ ಇರಬೇಕಾದ ಮೂವತ್ತಾರು ಗುಣಗಳೂ ಇವನಿಗಿದ್ದವು. ಅವನು ಒಂದು ದಿನ ದಂಡಿಯ ಬಳಿಗೆ ಬಂದಾಗ, ಹತ್ತಿರ ಇದ್ದವರು ದಂಡಿಗೆ ಇವನ ಪರಿಚಯವನ್ನು ಮಾಡಿಕೊಟ್ಟರು. ''ಈ ಶಿಲ್ಪಿ ಯಂತ್ರಗಳನ್ನು ಮಾಡಿ ಅವು ದ್ವಂದ್ವ ಯುದ್ಧವನ್ನು ಮಾಡುವಂತೆ ವ್ಯವಸ್ಥೆ ಮಾಡಿದವನು. ಯಂತ್ರಗಳಿಂದ ಅದ್ಭುತ ಕೆಲಸಗಳನ್ನು

ಮಾಡಿಸಿದವನು. ಕೃತಕವಾಗಿ ಮೋಡಗಳನ್ನು ಉಂಟುಮಾಡಿ ಅವುಗಳಿಂದ ಮಳೆಗರೆಸಿದವನು. ಇವನು ಶಿಲ್ಪಿ ಮಾತ್ರವಲ್ಲ, ಕವಿಯೂ ಹೌದು. ತಮಿಳಿನಲ್ಲಿ ಶೂದ್ರಕ ಚರಿತೆಯನ್ನು ಬರೆದಿದ್ದಾನೆ. ಯಂತ್ರಗಳ ನಿರ್ಮಾಣದಲ್ಲಿ ಯವನರಿಗಿಂತ ಹೆಚ್ಚಿನ ಪ್ರತಿಭೆ ಇವನದು.'' ಹೊಗಳಿಕೆಯ ಶಬ್ಧ ಅಡಗಿದ ಮೇಲೆ ಶಿಲ್ಪಿ ''ಸ್ವಾಮಿ, ನಾನು ಮಾಡಿರುವ ಅಲ್ಪ ಕೃತಿಗಳಿಗೆ ಇವರು ಅಷ್ಟೊಂದು ಹೆಗ್ಗಳಿಕೆಯನ್ನು ಹೇರುತ್ತಾರೆ. ಇದರ ತಾತ್ಪರ್ಯವೇನೆಂದರೆ ಪೂರ್ವದಲ್ಲಿದ್ದ ನೈಪುಣ್ಯ, ಸಾಮರ್ಥ್ಯ ಈಗ ಮರೆಯಾಗುತ್ತಿದೆ ಯಂದಷ್ಟೇ. ತಮ್ಮಂಥ ಶಾಸ್ತ್ರಜ್ಞರ, ಕವಿಗಳ ಮುಂದೆ ಹೇಳಿಕೊಳ್ಳುವಂಥ ಕೆಲಸವನ್ನು ನಾನೇನು ಮಾಡಿಲ್ಲ. ಆದರೂ ತಮ್ಮನ್ನು ನಾನು ಕೇಳಿಕೊಳ್ಳುವ ವಿಚಾರವೊಂದುಂಟು. ತಾವು ಮಾಮಲ್ಲಪುರದ ದೇಗುಲದಲ್ಲಿ ಶೇಷಶಾಯಿಯಾದ ವಿಷ್ಣುವಿನ ಶಿಲಾಮೂರ್ತಿಯನ್ನು ನೋಡಿದ್ದೀರಷ್ಟೇ. ಅದು ನಮ್ಮ ಪೂರ್ವಿಕರ ಕಲಾಕೃತಿ. ಈಚೆಗೆ ಅದರ ಕೈಯೊಂದು ಒಡೆದು ಹೋಯಿತು. ನಾನು ಅದನ್ನು ಈಗ ಸರಿಪಡಿಸಿದ್ದೇನೆ. ನನ್ನ ಕೆಲಸ ಸಮರ್ಪಕವಾಗಿದೆಯೇ ಎಂದು ತಾವು ಬಂದು ನೋಡಿ ಹೇಳಬೇಕು'' ಎಂದನು.

ಆಗ ದಂಡಿಯ ಮಿತ್ರನೂ, ರಾಜನ ಸೇನಾಪತಿಯ ಮಗನೂ ಆಗಿದ್ದ ರಾಣಮಲ್ಲನು ''ಹಾಗೆಯೇ ಆಗಲಿ, ಮಾಮಲ್ಲಪುರಕ್ಕೆ ನಾಳೆ ಹೋಗಿ ಬರೋಣ. ಅಲ್ಲಿ ನಮ್ಮ ಮಿತ್ರರಾದ ಮಾತ ದತ್ತ ಮತ್ತು ದೇವ ಶರ್ಮ ಇಬ್ಬರೂ ದಂಡಿಯನ್ನು ನೋಡಬೇಕೆಂದು ಬಯಸಿದ್ದಾರೆ'' ಎಂದನು. ಈ ಇಬ್ಬರು ಮಿತ್ರರು ಕೇರಳದ ಕಡೆಯಿಂದ ಬಂದಿದ್ದರು. ದಂಡಿಯು ಆಗಲಿ ಎಂದು ಒಪ್ಪಿದನು.

ಮರುದಿನ ಮುಂಜಾನೆಯೇ ಜಯಂತ ನಾರಾಯಣ ಮತ್ತು ಇತರ ಮಿತ್ರರೊಡಗೂಡಿ ದಂಡಿ ಕಡಲ ತೀರದ ಮಾಮಲ್ಲಪುರಕ್ಕೆ ಬಂದನು. ಅಲ್ಲಿ ಶ್ವೇತ ಪ್ರಾಸಾದವೊಂದನ್ನು ಕಂಡರು. ಅದನ್ನು ದಾಟಿ ಸಮುದ್ರ ತೀರಕ್ಕೆ ಬರಲು

ಅಲ್ಲಿ ಶೇಷಶಾಯಿಯಾದ ವಿಷ್ಣುವಿನ ಅದ್ಭುತ ಶಿಲಾಮೂರ್ತಿಯನ್ನು ಕಂಡರು. ನಿರಂತರವೂ ಸಮುದ್ರದ ಅಲೆಗಳು ಮಲಗಿದ ವಿಷ್ಣುವಿನ ಪಾದಗಳನ್ನು ಮುಟ್ಟುತ್ತಿದ್ದವು. ದಂಡಿಯೂ, ಅವನ ಸ್ನೇಹಿತರೂ ಹತ್ತಿರ ಬಂದು ಮೂರ್ತಿಯನ್ನು ಸಾವಧಾನವಾಗಿ ಪರೀಕ್ಷೆ ಮಾಡಿದರು. ಶಿಲ್ಪಿ ಹೇಳಿದಂತೆ ಯಾವ ಕೈಯೂ ಭಿನ್ನವಾದುದು ಕಂಡುಬರಲಿಲ್ಲ. ಪಕ್ಕದಲ್ಲೇ ಇದ್ದ ಶಿಲ್ಪಿಯ ಕಡೆ ತಿರುಗಿ ದಂಡಿ ''ಯಾವ ಕೈ ಒಡೆದಿದ್ದಿತು ? ನೀವು ಬೆಸುಗೆ ಹಾಕಿದ ಜಾಗ ಯಾವುದು?'' ಎಂದು ಕೇಳಲು ಶಿಲ್ಪಿ ''ನನ್ನ ಶ್ರಮ ಸಾರ್ಥಕವಾಯಿತು ಸ್ವಾಮಿ'' ಎಂದ ಸಂತೋಷಪಟ್ಟನು. ಒಡಕು ಎಲ್ಲೆಂಬುದು ಕೂಡ ಕಾಣ ಬರದಷ್ಟು ಜಾಣ್ಮೆಯಿಂದ ಅವನು ಸರಿಪಡಿಸಿದ್ದನು.

ಶಿಲ್ಪಿಯ ಕೌಶಲ್ಯವನ್ನೂ, ಮೂರ್ತಿಯ ಸೌಂದರ್ಯವನ್ನೂ ನೋಡುತ್ತ ಅವರೆಲ್ಲ ನಿಂತಿರುವಂತೆಯೇ ಸಮುದ್ರದಿಂದ ದೊಡ್ಡದೊಂದು ಕೆಂದಾವರೆ ಅಲೆಗಳ ಮೇಲೆ ತೇಲಿ ಬಂದಿತು. ಅಲೆಗಳು ಮೂರ್ತಿಯ ಪಾದದ ಮೇಲೆ ಹರಿದಾಗ ಹೂವು ಮೂರ್ತಿಯನ್ನು ಮುಟ್ಟಿತು. ಹೂವು ಮೂರ್ತಿಯನ್ನು ಮುಟ್ಟಿದೊಡನೆಯೇ ಅದು ವಿದ್ಯಾಧರನಾಗಿ ಮಾರ್ಪಟ್ಟಿತು. ವಿದ್ಯಾಧರನು ಮೂರ್ತಿಯನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ, ಆಕಾಶಕ್ಕೆ ಹಾರಿ ಮಾಯವಾದನು. ಎದುರಿಗಿದ್ದವರೆಲ್ಲ ನಿಬ್ಬೆರಗಾಗಿ ನೋಡುತ್ತ ನಿಂತುಬಿಟ್ಟರು. ಈ ಕೌತುಕವೇನೆಂದು ಯಾರಿಗೂ ತಿಳಿಯಲಿಲ್ಲ.

ಆಗ ಚೋಳ ದೇಶದ ರಾಮಶರ್ಮನು ದಂಡಿಯ ಕಡೆ ತಿರುಗಿ ''ಇದರ ಅರ್ಥ ಏನು ?'' ಎಂದು ಕೇಳಲು ದಂಡಿ ''ನನಗೆ ತಿಳಿಯದು ''ಎಂದನು.' ''ಹೀಗಿರಬಹುದು. ಈ ಗಂಧರ್ವ ಯಾವನೋ ಋಷಿಯೊಬ್ಬನ ಕೋಪಕ್ಕೆ ತುತ್ತಾಗಿ ಶಾಪ ಪಡೆದು ಕೆಂದಾವರೆಯಾಗಿರಬಹುದು. ಶೇಷಶಾಯಿಯ ಪಾದಸ್ಪರ್ಶದಿಂದ ಶಾಪ ವಿಮೋಚನೆಯೆಂದಿರಬಹುದು. ದೀರ್ಘ ಕಾಲದಿಂದ ಸಮುದ್ರದ ಮೇಲೆ ಅಲೆದಾಡುತ್ತಿದ್ದ ಈ ವಿದ್ಯಾಧರ ಈಗ ಶಾಪದಿಂದ ಮುಕ್ತನಾಗಿರಬೇಕು'' ಎಂದನು.

ಆಶ್ಚರ್ಯದಿಂದಲೂ, ಕುತೂಹಲದಿಂದಲೂ ಎಲ್ಲರೂ ಕಾಂಚೀಪುರಕ್ಕೆ ಹಿಂದಿರುಗಿದರು. ಸ್ನೇಹಿತರೆಲ್ಲ ದಂಡಿಯನ್ನೇ ''ಈ ಕೌತುಕವನ್ನು ಬಿಡಿಸಿ ಹೇಳು'' ಎಂದು ಒತ್ತಾಯಪಡಿಸುತ್ತಿದ್ದರು. ದಂಡಿಯು ಅನೇಕ ದಿನಗಳವರೆಗೆ ವಿಷ್ಣುವನ್ನು ಕುರಿತು ತಪಶ್ಚರ್ಯ ಮಾಡಿ, ಕಠಿಣವಾದ ವ್ರತವನ್ನು ನಡೆಸಿದನು. ಆಗ ಅವನ ಸ್ವಪ್ನದಲ್ಲಿ ವಾಗ್ದೇವಿಯಾದ ಸರಸ್ವತಿ ಕಾಣಿಸಿಕೊಂಡು ''ರಾಜವಾಹನನ ದಿವ್ಯ ಕಥೆ ನಿನ್ನಲ್ಲಿ ಸ್ಪಷ್ಟವಾಗಲಿ !'' ಎಂದು ಅನುಗ್ರಹಿಸಿದಳು.

ರಾತ್ರಿ ಕಳೆದು ಬೆಳಗಾಗಲು ದಂಡಿ ಉತ್ಸಾಹದಿಂದ ಎದ್ದು, ತನ್ನ ಆಹ್ನಿಕಗಳನ್ನೆಲ್ಲ ಮುಗಿಸಿ, ಸ್ನೇಹಿತರನ್ನೆಲ್ಲ ಕರೆದು ಅವಂತಿ ಸುಂದರಿಯ ಕಥೆಯನ್ನು ಹೇಳಿದನು.

ರಾಜಹಂಸನ ಕಥೆ

ಭಾರತ ಭೂಭಾಗದ ಆಭರಣವೆನಿಸಿದ ಮಗಧ ದೇಶದಲ್ಲಿ ಸುಸಮೃದ್ಧವಾದ ಕುಸುಮನಗರ ಎಂಬ ಪಟ್ಟಣವಿದೆ. ದೇಶಕ್ಕೆ ಅದೇ ರಾಜಧಾನಿ. ಹಿಂದೆ ಅಲ್ಲಿ ರಾಜಹಂಸನೆಂಬ ಹೆಸರಿನ ದೊರೆ ವೈಭವದಿಂದ ರಾಜ್ಯವಾಳುತ್ತಿದ್ದನು. ಪುಂಡ್ರದೇಶದ ಅರಸುಕುವರಿ ವಸುಮತಿ ಅವನ ಪಟ್ಟದ ರಾಣಿ. ರಾಜ ಸಮರಶೂರನಾದರೂ ಪ್ರಣಯರಸಿಕ. ರಾಜ್ಯ ನಿರ್ವಹಣ ವಿಚಕ್ಷಣನಾದರೂ ಸುಖಲೋಲುಪ. ತನ್ನ ರಾಜ್ಯದ ಆಡಳಿತವನ್ನೆಲ್ಲ ದಕ್ಷರಾದ ಮಂತ್ರಿಗಳ ವಶಕ್ಕೆ ಬಿಟ್ಟು, ತಾನು ವಸುಮತಿಯೊಂದಿಗೆ ನಿತ್ಯೋತ್ಸವ – ವಿಲಾಸ ಸಂಭ್ರಮದಲ್ಲಿ ಕಾಲ ಕಳೆಯುತ್ತಿದ್ದ. ಯೌವನದ ಸುಖವನ್ನು ಅವಿರತವಾಗಿ ಆಸ್ವಾದಿಸುತ್ತಿದ್ದ.

ಆದರೂ, ದಿನದ ಪೂರ್ವಾರ್ಧದಲ್ಲಿ ತನ್ನ ರಾಜ್ಯದ ಮೂಲೆ ಮೂಲೆಗಳಿಂದಲೂ ತನಗೆ ಗೂಢಚಾರರಿಂದ ಬರುತ್ತಿದ್ದ ವಾರ್ತೆಗಳನ್ನು ಕೇಳುವ ಪದ್ಧತಿಯನ್ನು ಅನುಸರಿಸುತ್ತಿದ್ದ. ರಾಜ್ಯ ಸದ್ಯಕ್ಕೆ ಸುಭದ್ರವಾಗಿದ್ದರೂ ಶತ್ರುಗಳು ಸುಮ್ಮನಿರುವುದುಂಟೆ ? ಸಮರ ಶೂರನಾದ ಇವನಿಂದ ಪರಾಭವ-ವನ್ನನುಭವಿಸಿದ ರಾಜರೆಲ್ಲ ಈಗ ಇವನ ಸಾಮಂತರಾಗಿದ್ದರು. ಆದರೆ ಅವರು ಅನುಕಾಲವೂ ಅನುಕೂಲರಾದ ಆಶ್ರಿತರಾಗಿಯೇ ಉಳಿಯುತ್ತಾರೆಯೇ ? ಸೋತವರು ಮುಯ್ಯಿ ತೀರಿಸಲು ಸಿದ್ಧರಾಗಿಯೇ ಇರುತ್ತಾರೆ. ರಾಜ ಎಚ್ಚರವಾಗಿರದಿದ್ದರೆ ಉಳಿಗಾಲವಿಲ್ಲ; ಗೂಢಚಾರರು ನಾಲ್ಕೂ ಮೂಲೆಗಳಿಗೆ ಹೋಗಿ ಅಲ್ಲೆಲ್ಲ ಸುತ್ತಾಡಿ, ಸುದ್ದಿಗಳನ್ನೂ ಸಂಗ್ರಹಿಸಿ, ರಾಜನಿಗೆ

ನಿವೇದಿಸುತ್ತಿದ್ದರು. ಒಂದು ದಿನ ಮಾಳವ ದೇಶದಲ್ಲಿ ಯತಿ ವೇಷದಿಂದ ಸುತ್ತಾಡಿ ಹಿಂದಿರುಗಿ ಬಂದ ದೂತನೊಬ್ಬನು ರಾಜನ ಬಳಿ ಬಂದು ಹೀಗೆಂದ -

"ಒಡೆಯ, ತಾವು ಹತ್ತಾರು ವರ್ಷಗಳ ಹಿಂದೆ ಮಾಳವ ದೇಶದ ಅರಸ ಮಾನಸಾರನನ್ನು ಯುದ್ಧದಲ್ಲಿ ಹಿಮ್ಮೆಟ್ಟಿಸಿದ ನೆನಪುಂಟಷ್ಟೇ? ಅಂದಿನಿಂದಲೂ ಈ ಅರಸ ತನಗೊದಗಿದ ಅಪಮಾನವನ್ನು ತೊಡೆದು ಹಾಕಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದಾನೆ. ಪುಣ್ಯ ಕ್ಷೇತ್ರಗಳಲ್ಲಿ ಆರಾಧನೆ ನಡೆಸಿದ್ದಾನೆ. ತಾಂತ್ರಿಕರ ನೆರವು ಪಡೆದು ಆಭಿಚಾರಿಕ ಕರ್ಮಗಳನ್ನು ಆಚರಿಸಿದ್ದಾನೆ. ಇಷ್ಟಾದರೂ ಅವನ ಮನೋರಥ ಕೈಗೂಡಲಿಲ್ಲ, ಕಡೆಗೆ ಉಜ್ಜಯಿನಿಯ ಮಹಾಕಾಲಸ್ವಾಮಿಯ ಸನ್ನಿಧಿಯಲ್ಲಿ , ಶಾಕ್ತ ಸಂಪ್ರದಾಯದ ಪೂಜೆಯನ್ನು ನಡೆಸಿ, ಮಹಾ ಮಾಂಸವನ್ನು ಸಮರ್ಪಿಸಿ ಕೃತಕೃತ್ಯನಾಗಿದ್ದಾನೆ. ಮಹಾಕಾಲಸ್ವಾಮಿಯ ಅನುಗ್ರಹದಿಂದ ಇವನು ಅಮೋಘವಾದ ಕರವಾಳ ವನ್ನು ಪಡೆದಿದ್ದಾನೆ. ಇದರ ಬಲದಿಂದ ನಿಃಶಂಕಸಾಹಸಿಯಾದ ಮಾನಸಾರ ರಾಜ ತಮ್ಮೊಂದಿಗೆ ಸಮರಕ್ಕಾಗಿ ಸನ್ನದ್ಧನಾಗುತ್ತಿದ್ದಾನೆ. ಕರವಾಳದ ಪ್ರಭಾವದಿಂದ ಅವನು ಸಮರದಲ್ಲಿ ವಿಜಯಿಯೇ ಆಗುವುದು ವರದ ಮಹಿಮೆಯಂತೆ."

ಒಡನೆಯೇ ರಾಜಹಂಸನು ಚಿಂತಾತುರನಾಗಿ ತನ್ನ ಆಪ್ತ ಸಚಿವರನ್ನೆಲ್ಲ ಬರಮಾಡಿಕೊಂಡು, ಈ ವಿಪತ್ತಿನಿಂದ ಪಾರಾಗುವ ಬಗೆಯನ್ನು ಕುರಿತು ಮಂತ್ರಾಲೋಚನೆ ನಡೆಸಿದನು. ದೈವದತ್ತವಾದ ವರದ ಮುಂದೆ ಮನುಷ್ಯರ ಬಲ ಬಲವೇ? ತನ್ನ ಸಮರ ಕೌಶಲ, ಭುಜಬಲ ಎಷ್ಟಿದ್ದರೂ ಮಹಾಕಾಲಸ್ವಾಮಿಯ ಕೃಪಾಣದ ಎದುರು ನಿರರ್ಥಕವೇ ! ಯುದ್ಧ ಮಾಡುವುದು ರಾಜತಂತ್ರವಲ್ಲ ಎಂದು ಮಂತ್ರಿಗಳು ದೀರ್ಘಕಾಲ ಸಮಾಲೋಚಿಸಿ ತಮ್ಮ ಸಲಹೆಯನ್ನು ದೊರೆಯ ಮುಂದೆ ಮಂಡಿಸಿದರು. ವೈರಿಯ ಬಲ ಸಹಜವಾಗಿಯೇ ಕುಂಠಿತವಾಗುವವರೆಗೂ ವಿಂಧ್ಯಪ್ರಾಂತ್ಯದ

ಕಾಡುಮೇಡುಗಳಲ್ಲಿ ರಾಜನೂ ಪರಿವಾರವೂ ಅಡಗಿಕೊಂಡಿದ್ದು, ಮತ್ತೆ ರಾಜ್ಯ ಗಳಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ತಂತ್ರಾಲೋಚನೆ ಮಾಡಿದರು . ಆದರೆ ಹೀಗೆ ಹೇಡಿಯಂತೆ ಹೆದರಿ ಅಡಗಲು ರಾಜ ಸಮ್ಮತಿಸಲಿಲ್ಲ. ರಾಜನಿಗೆ ಇರುವ ಒಂದೇ ನೇರವಾದ ದಾರಿ ಸಮರ; ಸಮರ ಬಯಸಿ ಬಂದ ಮಾನಸಾರನಿಗೆ ಸಮರದಾನ ಮಾಡುವುದು ತನ್ನ ಕರ್ತವ್ಯ ಎಂದು ಅವನ ಆಗ್ರಹ. ಪ್ರಸ್ತುತ ಸಂದರ್ಭದಲ್ಲಿ ತನಗೆ ಸೋಲು ಸಿದ್ಧವೆಂದು ಅವನಿಗೆ ತಿಳಿದಿದ್ದರೂ ಯುದ್ಧವನ್ನು ಮಾಡಿಯೇ ತೀರುವೆನೆಂದು ನಿರ್ಧರಿಸಿದನು. ಇಲ್ಲಿಂದ ಹೆದರಿ ಕಾಡಿಗೆ ಓಡಿದರೆ, ವೈರಿಗಳು ಅಲ್ಲಿಯೂ ಬೆನ್ನಟ್ಟಲಾರರೆ ? ಎಂದು ರಾಜನ ವಾದ.

ಮಂತ್ರಿಗಳು ಕಡೆಗೆ ಹೀಗೆ ನಿಶ್ಚಯಿಸಿದರು : ರಾಜನು ತನ್ನ ಚದುರಂಗ ಬಲದೊಂದಿಗೆ ಯುದ್ಧಕ್ಕೆ ಹೊರಡುವುದು ; ಮಂತ್ರಿಗಳು ರಾಣಿಯನ್ನು ಮಿತ ಪರಿವಾರದೊಂದಿಗೆ ವಿಂಧ್ಯಪ್ರಾಂತ್ಯಕ್ಕೆ ಕರೆದೊಯ್ದು ಅಲ್ಲಿ ಅಡಗಿಸುವುದು ಎಂದು. ರಾಣಿ ಆಗ ಗರ್ಭವತಿಯಾಗಿದ್ದಳು. ಹೀಗೆ ಮಂತ್ರಾಲೋಚನೆ ಮುಗಿಯುವ ಸಮಯಕ್ಕೇ ಮಾನಸಾರನ ಕಡೆಯಿಂದ ಬ್ರಾಹ್ಮಣನೊಬ್ಬನು ಬಂದು ಅರಸನನ್ನು ಕಾಣಬಯಸಿದನು. ರಾಜನ ಮುಂದೆ ಅವನು ಬಂದೊಡನೆ "ಅರಸನೇ, ಮಾಳವರಾಜನ ಸಂದೇಶವನ್ನು ಹೊತ್ತು ಬಂದಿದ್ದೇನೆ. ಮಾಳವ ರಾಜನು ತಮಗೆ ತನ್ನ ವಿಶ್ವಾಸಪೂರ್ವಕ ಅಭಿವಾದನೆಗಳನ್ನು ತಿಳಿಸಿದ್ದಾನೆ. ಅವನಿಗೆ ತಮ್ಮ ಸಮರದುಂದುಭಿಯನ್ನು ಮತ್ತೊಮ್ಮೆ ಕೇಳುವ ಮನಸ್ಸಾಗಿದೆ. ದಯಮಾಡಿ ಅನುಗ್ರಹಿಸಬೇಕು. ತಮ್ಮೊಂದಿಗೆ ಕಾದಾಡಿ, ತನ್ನ ಪಾಪಿ ದೇಹವನ್ನು ತ್ಯಜಿಸಬೇಕೆಂದಿದ್ದಾನೆ !" ರಾಜಹಂಸನು ಮರುಮಾತಾಡದೆ "ಆಗಲಿ, ನಾಳೆ ಮುಂಜಾನೆಯೇ ಪ್ರಯಾಗದ ಪರಿಸರದಲ್ಲಿ ನನ್ನ ಬಲವನ್ನು ಎದುರುಗೊಳ್ಳಲಿ, ತಿಳಿಸಿಬಿಡಿ !" ಎಂದು ಬಂದ ಬ್ರಾಹ್ಮಣನನ್ನು ಬೀಳ್ಕೊಟ್ಟನು.

ಬ್ರಾಹ್ಮಣನು ಹೊರಟು ಹೋದ ಮೇಲೆ ರಾಜನು ತನ್ನ ಸೇನಾಧಿಕಾರಿಯಾದ ಹರ್ಷನನ್ನು ಕರೆಸಿ ತನ್ನ ವಿಶಿಷ್ಟ ಸೇನೆಯನ್ನು ಒಡನೆಯೇ ಸಜ್ಜುಗೊಳಿಸುವಂತೆ ಆಜ್ಞಾಪಿಸಿದನು. ಆ ಸಂಜೆಯೇ ರಾಜಹಂಸನ ಚದುರಂಗ ಬಲವೂ ಸಿದ್ಧವಾಯಿತು; ರಾಜನು ಕ್ರಮವರಿತು ಅದನ್ನೆಲ್ಲ ಪರಿಶೀಲಿಸಿ ತನ್ನ ಮನಸ್ಸಮಾಧಾನಪಡಿಸಿಕೊಂಡನು. ಬ್ರಾಹ್ಮಣರಿಂದ ಶಾಂತಿ ಕರ್ಮಗಳನ್ನು ನಡೆಸಿ, ತನ್ನ ಬೊಕ್ಕಸವನ್ನೆಲ್ಲ ಬಡಬಗ್ಗರಿಗೆಂದು ಬರಿದು ಮಾಡಿ, ತನ್ನ ಪ್ರಜೆಗಳಲ್ಲಿ ಮುಖ್ಯರಾದವರನ್ನು ಕರೆಸಿ ಸನ್ಮಾನ ಮಾಡಿ ಆ ರಾತ್ರಿ ವಿರಮಿಸಿದನು. ಮರುದಿನ ಬೆಳಕು ಹರಿಯುವ ಮೊದಲೇ ತನ್ನ ಆನೆಯಾದ ಹೇಮಕೂಟವನ್ನೇರಿ, ಸೇನೆಯನ್ನು ಹಿಂದೆ ಮಾಡಿಕೊಂಡು, ಪಟುಭಟರಿಂದ ಸುತ್ತರಿದು ರಾಜ ದಿಗ್ವಿಜಯಾಪೇಕ್ಷೆಯಿಂದ ಹೊರಟನು.

ಪ್ರಯಾಗದ ಪರಿಸರದಲ್ಲಿ ಮಾನಸಾರನ ದಂಡು ಆಗಲೇ ನೆರೆದಿದ್ದಿತು. ಎರಡೂ ಕಡೆಯವರು ಕದನದಲ್ಲಿ ಕಲೆತರು. ಬಹು ಹೊತ್ತು ಕದನ ನಡೆಯಿತು; ಪಟು ಭಟರಾರ್ಭಟದಿಂದ ಭೂಮಿಯೇ ನಡುಗಿತು. ರಾಜಹಂಸನೂ ಮಾನಸಾರನೂ ತಂತಮ್ಮ ಆನೆಗಳ ಮೇಲೆ ಕೂತು ಕಾದಾಡಿದರು. ಆನೆಗಳು ಉರುಳಿದ ನಂತರ ಕುದುರೆಗಳನ್ನೇರಿ ಯುದ್ಧ ಮಾಡಿದರು. ಕುದುರೆಗಳು ಮಡಿದಾಗ ರಥಗಳನ್ನು ಏರಿ ಸಮರ ಮುಂದುವರೆಸಿದರು. ದೀರ್ಘಕಾಲ ' ಸೆಣಸಾಟವಾಯಿತು. ಇಬ್ಬರ ಶೌರ್ಯ - ಪ್ರತಾಪಗಳೂ ಪ್ರಕಟವಾದವು. ಕಡೆಗೆ ಮಾನಸಾರನು ತನಗೆ ಮಹಾಕಾಲನಿಂದ ಬಂದಿದ್ದ ಕರವಾಳವನ್ನು ರಾಜಹಂಸನ ಕಡೆ ಬೀರಿದನು. ರಾಜಹಂಸನು ಅದನ್ನು ಹಿಡಿದು ಮುರಿದು ಹಾಕಿದನಾದರೂ ಅದರ ಪೆಟ್ಟನ್ನು ತಡೆಯಲಾರದೆ ತತ್ತರಿಸಿ, ಪ್ರಜ್ಞೆ ತಪ್ಪಿ ಉರುಳಿದನು ; ರಥದ ಸಾರಥಿ ಅಲ್ಲಿಯೇ ಮಡಿದನು. ಕುದುರೆಗಳು ಕತ್ತಿಯ ಜ್ವಾಲೆಯನ್ನು ತಡೆಯಲಾರದೆ ದಿಕ್ಕೆಟ್ಟು ಓಡುತ್ತ ರಥವನ್ನು ಯುದ್ಧ ಭೂಮಿಯಿಂದ ಎಳೆದುಕೊಂಡು ಹೋದುವು.

ಸಂಜೆ ಸೂರ್ಯನು ಮುಳುಗುವ ವೇಳೆಗೆ ಈ ಪ್ರಸಂಗ ನಡೆದದ್ದು. ಅಲ್ಲಿಂದ ಮುಂದೆ ರಾತ್ರಿ - ಹಗಲೆನ್ನದೆ, ಆ ಕುದುರೆಗಳು ರಥವನ್ನೆಳೆದುಕೊಂಡು ಓಡೋಡಿ, ಎಂಟಾರು ದೇಶಗಳನ್ನು ದಾಟಿ, ಎಲ್ಲಿಯೂ ನಿಲ್ಲದೆ ಕಡೆಗೆ ಒಂದು ನಿರ್ಜನ ಪ್ರದೇಶದಲ್ಲಿ ಬಸವಳಿದು ನಿಂತುವು. ರಥವು ನೆಲೆಗೆ ಬಂದಾಗ ಒಳಗಿದ್ದ ರಾಜಹಂಸನೂ ಎಚ್ಚೆತ್ತನು. ತಾನು ಎಲ್ಲಿದ್ದೇನೆಂಬ ಅರಿವು ಅವನಿಗೆ ಆಗಲಿಲ್ಲ. ರಥದಿಂದಿಳಿದು ಅತ್ತಿತ್ತ ಓಡಾಡಿ ಆಯಾಸದಿಂದ ಮತ್ತೆ ಮಲಗಿದನು. ಪಕ್ಕದ ಪೊದೆಯ ಆಚೆ ಕೆಲವರು ಮಾತನಾಡುತ್ತಿದ್ದುದು ಕೇಳಿಸಿದಂತಾಗಿ ರಾಜ ಕಿವಿಗೊಟ್ಟು ಆಲೈಸಿದನು. ಅವರಲ್ಲೊಬ್ಬನು ಹೀಗೆನ್ನುತ್ತಿದ್ದ - "ಅಂತೂ ಮಗಧ ರಾಜ್ಯದ ಪುಣ್ಯದಿಂದ ರಾಣಿ ಸುಕುಮಾರನನ್ನು ಹೆತ್ತಳು. ಆಕೆಯನ್ನು ಇಲ್ಲಿಗೆ ತಾವು ರಾಜಹಂಸನ ಆಣತಿಯಂತೆ ಕರೆತಂದಾಗ ಇದ್ದ ಆತಂಕ ಇದೀಗ ಮರೆಯಾಯಿತು. ಮಗುವಿನ ಮೈಮೇಲೆ ಸುಲಕ್ಷಣಗಳು ಕಾಣಿಸುತ್ತಿವೆ ; ಜೋಯಿಸರೂ ಶುಭ ನುಡಿದಿದ್ದಾರೆ. ಈ ಹೊತ್ತೇ ಹನ್ನೊಂದನೇಯ ದಿನವಲ್ಲವೆ ? ಜಾತಕರ್ಮಗಳೇನೋ ಸಾಂಗವಾಗಿ ನೆರವೇರಿದುವು. ಆದರೆ ನಿನ್ನೆ ರಾತ್ರಿ ಏನು ದುಃಸ್ವಪ್ನವಯ್ಯ ! ಹುಟ್ಟಿದ ಮಗುವನ್ನು ಯಾವುದೋ ಅನಿಷ್ಟ ಹಕ್ಕಿ ಹಾರಿಬಂದು ಎತ್ತಿಕೊಂಡು ಹೋದ ಹಾಗೆ ಕನಸು !"

ರಾಜನು ಇದನ್ನೆಲ್ಲ ಕೇಳುತ್ತಿದ್ದ ಹಾಗೆಯೇ ದೂರದಲ್ಲಿ ಹೆಂಗಸೊಬ್ಬಳು "ಅಯ್ಯೋ ! ಯಾರೋ ಮನುಷ್ಯ ಹಂಸದ ಹಾಗೆ ಬಂದು ಮಗುವನ್ನೆತ್ತಿಕೊಂಡು ಹಾರಿಹೋಗುತ್ತಿದ್ದಾನೆ ! "ಎಂದು ಕೂಗಿದಳು. ರಾಜನಿಗೆ ಇದು ತನ್ನ ರಾಣಿಯೂ ಮಂತ್ರಿಗಳೂ ಅಡಗಿಕೊಂಡಿರುವ ಸ್ಥಳವೇ ಎಂದು ತಿಳಿಯಿತು. ರಾಣಿಯು ತುಂಬ ದುಃಖಾರ್ತೆಯಾದಂತೆಯೂ ಪ್ರಧಾನಸಚಿವನಾದ ಸುಮತಿಯೊಂದಿಗೆ ಮಾತನಾಡುತ್ತಿದ್ದುದೂ ರಾಜನಿಗೆ ತಿಳಿಯಿತು. ರಾಣಿ ಹೇಳುತ್ತಿದ್ದುದು ಹೀಗೆ "ಪ್ರಧಾನಿಗಳೇ, ರಾಜನ

ಆಣತಿಯಂತೆ ಇಲ್ಲಿಗೆ ಬಂದು ವಿಂಧ್ಯವಾಸಿನೀ ದೇವಿಯನ್ನು ಆರಾಧಿಸಿ ಮಗುವನ್ನು ಪಡೆದಿದ್ದೇನೆ. ಆದರೆ ನನ್ನ ದುರದೃಷ್ಟದಿಂದ ಮಗು ನಷ್ಟವಾಯಿತು. ದುಃಖ ನನ್ನ ದೇಹವನ್ನು ಸುಡುತ್ತಿದೆ. ಅಗ್ನಿಯಲ್ಲಿ ಬಿದ್ದು ಅದನ್ನು ಪೂರ್ಣವಾಗಿ ಸುಡುತ್ತೇನೆ. ರಾಜನನ್ನು ನೀವು ಮತ್ತೆ ಕಾಣುವುದಾದರೆ ನನ್ನ ಸಾಷ್ಟಾಂಗ ಪ್ರಣಾಮಗಳನ್ನು ತಿಳಿಸಿರಿ !''

ಮಂತ್ರಿಗಳು ಆಕೆಯನ್ನು ಸಮಾಧಾನಮಾಡಲೆತ್ನಿಸುತ್ತಿದ್ದರು. ''ತಾಯಿ, ನಿಮ್ಮ ಮಗುವಿಗೆ ಚಕ್ರವರ್ತಿ ಯೋಗವಿದೆಯೆಂದು ಜಾತಕ ಹೇಳುತ್ತದೆ. ಎಲ್ಲ ಶುಭಲಕ್ಷಣಗಳೂ ಮೈಮೇಲಿವೆ. ಮಗು ಸತ್ತು ಹೋಗಿರುವುದು ಅಸಂಭವ. ಇಲ್ಲಿಯೇ ಅಡಗಿಕೊಂಡಿರಬಹುದು, ಹುಡುಕುವೆವು'' ಎಂದು ಅವರು ಎಷ್ಟು ಪರಿಯಿಂದ ಸಂತೈಸಿದರೂ ರಾಣಿ ಕೃತ ನಿಶ್ಚಯಳಾಗಿದ್ದಳು. ಈ ಮಾತುಕತೆ ನಡೆದದ್ದು ಸಂಜೆಯ ಸುಮಾರಿಗೆ. ರಾಜ ಇದನ್ನೆಲ್ಲ ದೂರದಿಂದ ಕೇಳುತ್ತಿದ್ದರೂ ತಾನಿದ್ದುದನ್ನು ಅವರಿಗೆ ತಿಳಿಸುವಷ್ಟು ಚೈತನ್ಯ ಅವನಿಗಿರಲಿಲ್ಲ. ಅವನ ದನಿ ತೀರ ಕುಗ್ಗಿ ಹೋಗಿದ್ದಿತು. ಉಪಾಯಗಾಣದೆ ಆತಂಕದಿಂದ ಹಾಗೆಯೇ ಮಲಗಿದ್ದನು.

ನಡು ರಾತ್ರಿಯ ಸಮಯದಲ್ಲಿ ರಾಣಿ ಸದ್ದು ಮಾಡದೇ ತಾನಿದ್ದ ಬಿಡದಿಯಿಂದ ಹೊರಹೊರಟು, ರಾಜನು ಮಲಗಿದ್ದ ಪೊದೆಯ ಬಳಿಯೇ ಬಂದು, ಕೊರಳಿಗೆ ಸೀರೆಯನ್ನು ಕಟ್ಟಿಕೊಂಡು ಉರುಳು ಹಾಕಿಕೊಳ್ಳುವ ಉದ್ದೇಶದಿಂದ ''ಸ್ವಾಮಿಯೇ ! ಸಾಯುತ್ತಿದ್ದೇನೆ, ಸದ್ಗತಿಯನ್ನು ಕರುಣಿಸು !'' ಎಂದು ಸಣ್ಣದನಿಯಲ್ಲಿ ಹೇಳಿದಳು. ಕತ್ತಲೆ ಸುತ್ತಲೂ ಆವರಿಸಿದ್ದಿತಾಗಿ ರಾಜನಿರುವುದನ್ನು ಆಕೆ ನೋಡಲಿಲ್ಲ ; ರಾಜನಿಗೂ ಆಕೆ ಯಾರೆಂದು ಕಾಣಲಿಲ್ಲ. ಆದರೂ ರಾಜ ''ಆತುರಪಡಬೇಡ ! ಅಪಮೃತ್ಯುವಿಗೆ ಕೈಹಾಕಬೇಡ !'' ಎಂದು ಕಿರುದನಿಯಲ್ಲಿ ಉಸುರಿದನು. ರಾಣಿ ದನಿಯಿಂದಲೇ ಅವನು ರಾಜನೆಂದು ತಿಳಿದುಕೊಂಡು 'ದೀಪವನ್ನು ತನ್ನಿರಿ ' ಎಂದು ತನ್ನ ಪರಿಚಾರಕರನ್ನು ಕೂಗಿದಳು. ಪರಿಚಾರಕರು ದೀಪವನ್ನು ತರಲು, ಅದರಿಂದ

ರಾಜನನ್ನು ನೋಡಿದಳು. ಮೈಯೆಲ್ಲ ಗಾಯವಾಗಿ, ರಕ್ತವೆಲ್ಲ ಹೆಪ್ಪು ಗಟ್ಟಿ ಧೂಳಡರಿ, ಕಂಗಾಲಾಗಿ ಬಿದ್ದಿದ್ದ ರಾಜನನ್ನು ನೋಡಿದೊಡನೆ ತಾನು ಪ್ರಜ್ಞೆತಪ್ಪಿ ಬಿದ್ದಳು.

ಆಕೆಗೆ ತಿಳಿವು ಮತ್ತೆಮೂಡಿದಾಗ ರಾಜ ಪ್ರಜ್ಞಾಹೀನನಾಗಿದ್ದ. ರಾಜ ತೀರಿಕೊಂಡನೆಂದು ತಿಳಿದು ಆಕೆ ತಾನೂ ಸಹಗಮನ ಮಾಡುವೆನೆಂದು ನಿಶ್ಚಯಿಸಿದಳು. ಸಹಗಮನಕ್ಕೆ ಚಿತೆಯನ್ನು ಸಿದ್ಧಮಾಡಿರಿ ಎಂದು ಚಾಕರರಿಗೆ ಹೇಳುತ್ತಿರುವಷ್ಟರಲ್ಲಿಯೇ ರಾಜನು ಕಣ್ಣು ತೆರೆದು ಸುತ್ತಲೂ ನೋಡಿ ಎದ್ದು ಕುಳಿತನು. ದೇಹದ ಬಾಧೆಗಳೆಲ್ಲ ತೊಲಗಿ ಹೋದಂತೆ ತೋರಿತು; ತಂಗಾಲಿಯಿಂದ ಮೈ ಸುಧಾರಿಸಿದಂತೆ ಕಂಡಿತು, ಮುಖದಲ್ಲಿ ಸಮಾಧಾನದ ಕಿರುನಗೆ ಮೂಡಿತು. ಇದನ್ನು ಕಂಡು ರಾಣಿಗೆ ಪರಮಾನಂದವಾಯಿತು; ಓಡಿಬಂದು ಅವನನ್ನು ಅಪ್ಪಿಕೊಂಡಳು. ಮಂತ್ರಿಗಳಿಗೂ ಪರಿಜನರಿಗೂ ಆಶ್ಚರ್ಯವೂ ಸಂತೋಷವೂ ಒಮ್ಮೆಲೇ ಮೂಡಿಬಂದುವು.

ಎಲ್ಲರೂ ಅವನ ಸುತ್ತ ನೆರೆದು, ಅವನನ್ನು ಉಪಚರಿಸಿ, ಅವನಿಗೆ ತಿಂಡಿ ತಿನಿಸುಗಳನ್ನು ಕೊಟ್ಟು, ಆಯಾಸ ಪರಿಹರಿಸಿದ ನಂತರ ರಾಜನು ಅವರಿಗೆ ತನ್ನ ಅನುಭವಗಳನ್ನು ವಿವರಿಸಿದನು. ಅವರೆಲ್ಲ ಕುತೂಹಲದಿಂದ ಆಲಿಸಿದರು.

ರಾಜಹಂಸನು ತಾನು ಯುದ್ಧ ಭೂಮಿಗೆ ಹೊರಟಾಗಿನಿಂದ, ರಥದಲ್ಲಿ ಎಚ್ಚರ ತಪ್ಪಿ ಬೀಳುವವರೆಗೂ ನಡೆದುದನ್ನೆಲ್ಲ ಮಂತ್ರಿಗಳಿಗೂ, ರಾಣಿಗೂ, ಪರಿಜನರಿಗೂ ವಿವರವಾಗಿ ತಿಳಿಸಿ ಮುಂದೇ ಹೀಗೆಂದನು. ‘‘ಕುದುರೆಗಳು ರಥವನ್ನು ಎಳೆದುಕೊಂಡು ಇಲ್ಲಿಗೆ ಬಂದುವು. ಈಗ ರಾಣಿಯನ್ನೂ ಕಂಡೆನಷ್ಟೇ. ಅವಳ ದನಿಯನ್ನು ಕೇಳಿದೊಡನೆ ನೀವೆಲ್ಲ ದೀಪವನ್ನು ತಂದು ಇಲ್ಲಿಗೆ ಬಂದಾಗ ನನಗೆ ಮತ್ತೆ ಎಚ್ಚರ ತಪ್ಪಿತು. ಈ ಪ್ರಜ್ಞಾಹೀನ ಸ್ಥಿತಿಯಲ್ಲಿ ಮಹಾಕಾಲಸ್ವಾಮಿಯೇ ನನ್ನೆದುರು ಬಂದಂತಾಯಿತು. ಮನಸ್ಸಿನಲ್ಲಿಯೇ ನಮಸ್ಕರಿಸಿದೆ. ಆಗ ಸ್ವಾಮಿಯೂ ನನ್ನನು ಕುರಿತು, ‘ಮಗುವೇ, ಸಮರದಲ್ಲಿ

ನೀನು ತೋರಿಸಿದ ಶೌರ್ಯದಿಂದ ಸುಪ್ರಸನ್ನನಾಗಿದ್ದೇನೆ. ನನ್ನ ಕರವಾಲವನ್ನು ನೀನು ಮುರಿದುಹಾಕಿದುದು ನನಗೆ ಪ್ರೀತಿಯನ್ನೇ ಉಂಟುಮಾಡಿತು. ಕುದುರೆಗಳು ನಿನ್ನ ರಥವನ್ನು ಇಲ್ಲಿಗೆ ಎಳೆದುಕೊಂಡು ಬಂದುದು ನನ್ನ ಆಣತಿಯಿಂದಲೇ. ಕಾಲಕ್ರಮದಲ್ಲಿ ನಿನ್ನ ರಾಜ್ಯವನ್ನು ನೀನು ಪಡೆಯುವಿ. ಅಶೇಷವಾದ ಜಂಬುದ್ವೀಪಕೆ ಅಧಿಪತಿಯಾಗುವ ರಾಜವಾಹನ ಎಂಬ ಮಗನನ್ನು ನೀನು ಪಡೆಯುತ್ತೀ. ಅವನು ಹದಿನಾರು ವರ್ಷದವನಾದಾಗ ನೀನು ವಾನಪ್ರಸ್ಥನಾಗಿದ್ದು ಅವನನ್ನು ಭೂಮಂಡಲ ದಿಗ್ವಿಜಯಕ್ಕೆ ಕಳುಹಿಸು. ನಿನ್ನ ಮೊದಲನೆಯ ಮಗ ಹಂಸವಾಹನ ಸುರಕ್ಷಿತನಾಗಿದ್ದಾನೆ 'ಎಂದು ಹೇಳಿ ಮರೆಯಾದನು. ಒಡನೆಯೇ ನನಗೆ ಎಚ್ಚರವಾಯಿತು. ದೇಹದ ಬಾಧೆಯೆಲ್ಲ ಶಮನವಾಯಿತು."

ನೆರೆದವರೆಲ್ಲ ಈ ಕೌತುಕವನ್ನು ಕೇಳಿ ಬೆರಗಾಗಿ, ಅದನ್ನು ತಮ್ಮತಮ್ಮೊಳಗೆ ಚರ್ಚಿಸುತ್ತಿರಲು ರಾತ್ರಿ ಕಳೆದು ಬೆಳಗಾಯಿತು.

ರಾಜವಾಹನನ ಜನನ

ಆಯುರ್ವೇದ ವಿಶಾರದರಾದ ವೈದ್ಯರು ರಾಜನ ಗಾಯಗಳಿಗೆ ಮದ್ದು ಮಾಡಿ, ಅವನ ಬಾಧೆಗಳನ್ನು ಪರಿಹರಿಸಿದರು. ವೈದ್ಯದಿಂದಲೂ, ಪರಿಜನರ ಸೇವೆಯಿಂದಲೂ, ರಾಣಿಯ ಹರಕೆಗಳಿಂದಲೂ ಗುಣಮುಖನಾದ ರಾಜ ಮತ್ತೆ ಎದ್ದು ಓಡಾಡತೊಡಗಿದನು. ಒಂದು ದಿನ ಮುಂಜಾನೆ ತನ್ನ ಪರಿಜನರೊಡಗೂಡಿ ರಾಜನು ನರ್ಮದಾ ನದಿ ತೀರದಲ್ಲಿ ಇದ್ದ ವಾಮದೇವ ಋಷ್ಯಾಶ್ರಮಕ್ಕೆ ಬಂದನು. ವಾಮದೇವ ಋಷಿಯನ್ನು ಸಂದರ್ಶಿಸಿ, ದಂಡಪ್ರಣಾಮ ಮಾಡಿ, ಕುಶಲವನ್ನು ಕೇಳಿದ ನಂತರ ಋಷಿಯು ಆದರದಿಂದ ರಾಜನ ಕ್ಷೇಮಲಾಭಗಳನ್ನು ಕೇಳಿ ತಿಳಿದುಕೊಂಡು, ಕೆಲವು ಕಾಲ ಈ ಆಶ್ರಮದಲ್ಲಿಯೇ ಇರುವಂತೆ ನಿರ್ದೇಶಿಸಿದನು.

ಆಶ್ರಮವಾಸಿಗಳಿಗೆ ರಾಜನ ಪರಿಚಯವನ್ನು ಮಾಡಕೊಡುತ್ತ ಋಷಿಯು "ಈ ರಾಜನದು ಚಂದ್ರವಂಶ. ತುಂಬ ಪ್ರಭಾವಶಾಲಿಗಳಾದ ರಾಜ ಮಹಾರಾಜರು ಈ ವಂಶದಲ್ಲಿ ಆಗಹೋಗಿದ್ದಾರೆ; ಈ ರಾಜನ ತಂದೆಯಾಗಿದ್ದ ರಿಪುಂಜಯ ನನಗೆ ಪರಿಚಿತ. ಅವನಿಗೆ ಬಹುಕಾಲ ಮಕ್ಕಳಾಗದಿರಲು ನನ್ನ ಆಶ್ರಮಕ್ಕೆ ಬಂದು ನನ್ನ ಸಲಹೆಯನ್ನು ಕೇಳಿದ. ವಿಂಧ್ಯಪರ್ವತಕ್ಕೆ ಹೋಗಿ, ಅಲ್ಲಿ ಜಲಶಾಯಿವಿಷ್ಣುವನ್ನು ಕುರಿತು ತಪಶ್ಚರ್ಯ ಮಾಡುವಂತೆ ನಾನು ಸೂಚಿಸಿದೆ. ರಿಪುಂಜಯರಾಜ ಹಾಗೆಯೇ ಮಾಡಿದ. ತಪಸ್ಸು ಮುಗಿಯುವ ವೇಳೆಗೆ ರಾಜನಿಗೆ ಒಂದು ರಾತ್ರಿ ಕನಸಿನಲ್ಲಿ ವಿಷ್ಣು ಕಾಣಿಸಿಕೊಂಡು ಅವನ ಮನೋರಥ ಪೂರಣವಾಗುವುದೆಂದು ಆಶ್ವಾಸನೆಯಿತ್ತನಂತೆ. ಉಜ್ಜಯಿನಿಯ ರಾಜನನ್ನು

ಸಮರದಲ್ಲಿ ಸೆಣಸಿ, ಅಮರ್ದಕ - ಶಿವನ ಕರವಾಳವನ್ನೂ ಎದುರಿಸುವ ಶೌರ್ಯವುಳ್ಳ ಮಗ ತನಗೆ ಹುಟ್ಟುವನೆಂದು ರಾಜನಿಗೆ ಸ್ವಪ್ನದಲ್ಲಿ ತಿಳಿಯಿತು. ಕೃಷ್ಣನ ಮಕ್ಕಳಾದ ಪ್ರದ್ಯುಮ್ನ, ಸಾಂಬ ಇವರು ತನಗೆ ಮೊಮ್ಮಕ್ಕಳಾಗಿ ಹುಟ್ಟುವರೆಂದೂ ಆಗಲೇ ಅವನಿಗೆ ತಿಳಿದದ್ದು. ಈ ಸುದ್ದಿಯನ್ನು ರಾಜನೇ ನನ್ನಲ್ಲಿ ಅರಿಕೆಮಾಡಿಕೊಂಡ. ಅನಂತರ ಅವನು ಮಗಧದೇಶಕ್ಕೆ ಹಿಂದಿರುಗಿದ. ಕಾಲಕ್ರಮದಲ್ಲಿ ನಿಮ್ಮ ಮುಂದೆ ನಿಂತಿರುವ ಈ ರಾಜಹಂಸರಾಜ ರಿಪುಂಜಯನ ಮಗನಾಗಿ ಹುಟ್ಟಿದ. ಇವನು ಪ್ರಾಪ್ತವಯಸ್ಕನಾದಾಗ, ರಿಪುಂಜಯರಾಜ ರಾಜ್ಯ ನಿರ್ವಹಣ ಭಾರವನ್ನು ಇವನ ಮೇಲಿರಿಸಿ ತಾನು ಈ ಪ್ರದೇಶಕ್ಕೆ ಬಂದು ವಾನಪ್ರಸ್ಥಮುನಿಯಾಗಿ ಬಹಳ ವರ್ಷಗಳು ಜೀವಿಸಿದ್ದು ಕಡೆಗೆ ದೇಹವಿಟ್ಟು ವಿಷ್ಣುಪದವನ್ನು ಸೇರಿದ. ರಾಜನ ಕುಟೀರವಿದ್ದ ಸ್ಥಳವನ್ನು ರಿಪುಂಜಯಾಶ್ರಯವೆಂದೇ ಈಗಲೂ ವ್ಯವಹರಿಸುತ್ತಾರೆ '' ಎಂದು ಹೇಳಿದನು. ಇಷ್ಟರಲ್ಲಿ ಮಧ್ಯಾಹ್ನವಾಯಿತು. ಋಷಿ ತನ್ನ ನಿತ್ಯ ನೈಮಿತ್ತಿಕ ಅನುಷ್ಠಾನಗಳನ್ನು ಮಾಡಲು ಎದ್ದು ಹೊರಟ. ರಾಜನಿಗೆ ಈ ವೇಳೆಗಾಗಲೇ ಆಶ್ರಮದಲ್ಲಿ ರಾಜಯೋಗ್ಯವಾದ ಬಿಡದಿ ಸಿದ್ಧವಾಗಿದ್ಧಿತು. ರಾಜನು ತನ್ನ ಪರಿವಾರದೊಂದಿಗೆ ಋಷಿಯ ಕುಟೀರದಿಂದ ಹೊರಟು ಬಿಡದಿಯನ್ನು ಸೇರಿದನು. ಸಂಜೆಯಂದು ರಿಪುಂಜಯಾಶ್ರಮಕ್ಕೆ ತೆರಳಿ, ತನ್ನ ತಂದೆ ವಾಸಮಾಡುತ್ತಿದ್ದ ಸ್ಥಳವನ್ನು ಸಂದರ್ಶಿಸಿಕೊಂಡು ಹಿಂದಿರುಗಿ ಬಂದನು. ಈ ಮಧ್ಯೆ ಆ ಪರಿಸರದಲ್ಲಿ ಗುಹಾಲಯವೊಂದು ಇರುವುದು ರಾಣಿಗೆ ತಿಳಿದು ಅಲ್ಲಿಗೆ ತನ್ನ ಸಖಿ ಜನರೊಂದಿಗೇ ಹೊರಟಳು. ಅದು ಜಾಗ್ರತವಾದ ಪುಣ್ಯ ಕ್ಷೇತ್ರವೆಂದೂ, ಸಂತಾನಾಪೇಕ್ಷೆಯಿರುವ ಹೆಂಗಳೆಯರು ಅಲ್ಲಿಗೆ ಹೋಗಿ ಗುಹಸ್ವಾಮಿಯ ಸೇವೆಮಾಡಿ ಬರುತ್ತಾರೆಂದೂ, ಈ ಗುಡಿಯ ಕೀರ್ತಿಯಿದ್ದಿತು. ಅಲ್ಲಿ ಬಂಡೆಯ ಮೇಲೆ ಉಮಾ ಮಹೇಶ್ವರರೊಂದಿಗೆ ಆಟವಾಡುತ್ತಿರುವ ಮಗುವಿನ ಹಾಗೆ ಗುಹಸ್ವಾಮಿಯ ಮೂರ್ತಿಯನ್ನು ಕಡೆದಿದ್ದರು. ರಾಣಿಯು ಈ ಮೂರ್ತಿಯನ್ನು ನೋಡಿದೊಡನೆ ತನ್ನ ಮಗನ ನೆನಪಾಗಿ ಕಣ್ಣುಗಳಿಂದ ನೀರು

ಹರಿಯಲು ಮೊದಲಿಟ್ಟಿತು. ಹುಟ್ಟಿದ ಒಬ್ಬನೇ ಮಗ ಹಂಸವಾಹನನನ್ನು ಹಂಸರೂಪದಲ್ಲಿ ಯಾರೋ ಅಪಹರಿಸಿಕೊಂಡು ಹೋಗಿಬಿಟ್ಟರಲ್ಲವೇ? ಈಗ ಮತ್ತೆ ಪುತ್ರಕಾಮಿನಿಯಾಗಿ ಗುಹಾಲಯಕ್ಕೆ ಬರಬೇಕಾಯಿತ್ತಲ್ಲವೇ?

ಅದೇ ಸಮಯಕ್ಕೆ ಸರಿಯಾಗಿ ಇಪ್ಪತ್ತು ವರ್ಷ ಹರೆಯದ ಶಬರ ಕನ್ನಿಕೆಯೊಬ್ಬಳು ವೃದ್ಧ ಶಬರ ನಾಯಕನೊಬ್ಬನೊಂದಿಗೆ ಅದೇ ಗುಹಾಲಯಕ್ಕೆ ಬಂದಳು. ಹುಡುಗಿಯ ಹೆಸರು ವಿಂಧ್ಯಸೇನೆ; ಅವಳೊಂದಿಗೆ ಬಂದಿದ್ದ ಮುದುಕ ಅವಳ ಮಾವ. ರಾಣಿ ಕಣ್ಣೀರಿಡುತ್ತಿರುವುದನ್ನು ಕಂಡ ಆ ಹುಡುಗಿ ರಾಣಿಯ ಬಳಿಗೆ ಬಂದು ಕಣ್ಣೀರಿನ ಕಾರಣವನ್ನು ಕೇಳಿದಳು. ಒಡನೆಯೇ ರಾಣಿಗೆ ಅವಳ ಮೇಲೆ ಮಮತೆ ಮೂಡಿಬಂದು ತನ್ನ ಮಗುವನ್ನು ಹಂಸ ಹಾರಿಸಿಕೊಂಡು ಹೋದ ಕಥೆಯನ್ನು ಹೇಳಿದಳು. ಕಥೆ ಮುಗಿಯುವ ವೇಳೆಗೆ ರಾಜನೂ ರಾಣಿಯನ್ನು ಅರಸಿಕೊಂಡು ಅಲ್ಲಿಗೆ ಬಂದನು. ಶಬರ ಕನ್ಯೆಯ ಮತ್ತು ಶಬರ ನಾಯಕನ ಪರಿಚಯವಾಯಿತು. ರಾಣಿ ಆ ಕಾಡುಹುಡುಗಿಯನ್ನು ತನ್ನ ಪ್ರಿಯಸಖಿಯೆಂದೇ ರಾಜನಿಗೆ ಪರಿಚಯ ಮಾಡಿಕೊಟ್ಟಳು ! ಶಬರನಾಯಕನ ಬಲ ಕೈಯಲ್ಲಿ ರತ್ನ ಕಂಕಣವಿದ್ದುದು ರಾಜನ ಕಣ್ಣಿಗೆ ಬಿದ್ದಿತು ; ತನ್ನನ್ನೇ ದಿಟ್ಟಿಸಿ ನೋಡುತ್ತಿದ್ದ ಆ ಮುದುಕನ ಕಣ್ಣುಗಳಿಂದ ನೀರು ಸುರಿಯುತ್ತಿದ್ದುದನ್ನೂ ರಾಜ ನೋಡಿದನು. ಆಗ ರಾಜ 'ಏನು ಕಾರಣ, ಅಳುತ್ತಿದ್ದೀ ?,' ಎಂದು ಕೇಳಲು ಶಬರನಾಯಕನು ಅವನಿಗೆ ತಲೆ ಬಾಗಿ, ವಂದಿಸಿ ಹೀಗೆ ಹೇಳಿದನು–

''ಒಡೆಯ, ನನಗೊಬ್ಬ ತಮ್ಮನಿದ್ದ. ಅವನ ಹೆಸರು ಚಂಡಕೃಷ್ಣ. ಹೆಸರಿಗೆ ತಕ್ಕಂತೆ ಅವನ ಸ್ವಭಾವ ಚಂಡವೇ. ಅವನ ಗುಣ ಕೃಷ್ಣವೇ. ಕ್ರೌರ್ಯದಲ್ಲಿ ಅವನನ್ನು ಮೀರಿಸುವವರು ಯಾರೂ ಇರಲಿಲ್ಲ. ನಮ್ಮ ನೆಂಟರಿಷ್ಟರೆಲ್ಲರನ್ನೂ ಕಾಡಿ, ಕೊಂದು, ಅವರಿಗಾಗಿ ಮರುಗಲು ನನ್ನೊಬ್ಬನನ್ನು ಮಾತ್ರ ಉಳಿಸಿದ. ಅವನಿದ್ದಾಗ ಈ ಕಾಡಿನಲ್ಲಿ ಯಾವ ಮುನಿಗೂ ನೆಮ್ಮದಿಯಿರಲಿಲ್ಲ. ಯಾವ

ಮೃಗಕ್ಕೂ ಅಂಜಿಕೆ ತಪ್ಪಿರಲಿಲ್ಲ. ಹೀಗಿರಲು ಒಮ್ಮೆ ರಿಪುಂಜಯ ಎನ್ನುವ ರಾಜನೊಬ್ಬ ಇಲ್ಲಿಗೆ ತಪಸ್ಸಿಗೆಂದು ಬಂದ. ಅವನು ತುಂಬ ಪರಾಕ್ರಮಿ. ಋಷಿಗಳೆಲ್ಲರೂ ಅವನ ಬಳಿ ಹೋಗಿ ಶಬರ ಜನರ ಒಡೆಯನಾಗಿದ್ದ ಚಂಡ ಕೃಷ್ಣನಿಂದ ತಮಗೆ ಒದಗಿದ್ದ ಆತಂಕವನ್ನು ಹೇಳಿಕೊಂಡರು. ರಾಜ ಅವನನ್ನು ಹಿಡಿದು ಕೊಂದು, ಅನಂತರ ಶಬರರ ಒಡೆತನವನ್ನು ನನಗೆ ಕೊಟ್ಟನು. ಕೃತಜ್ಞತೆಯಿಂದ ನಾನು ಸಮರ್ಪಿಸಿದ ಕಾಣಿಕೆಯೊಂದನ್ನು ಅವನು ಮುಟ್ಟದೇ ತಾನೇ ನನಗೆ ಅನರ್ಘ್ಯವಾದ ಈ ರತ್ನ ಕಂಕಣವನ್ನು ತೊಡಿಸಿದನು. ನಿಮ್ಮನ್ನು ಈಗ ನೋಡಿದಾಗ ಆ ರಾಜನ ನೆನಪು ಆಯಿತು. ನಿಮ್ಮಿಬ್ಬರ ಮುಖಲಕ್ಷಣಗಳಲ್ಲಿ ಸಾದೃಶ್ಯವಿದೆ. ರಾಜನ ನೆನಪಿನಿಂದಾದ ಸಂತೋಷದಿಂದ ಕಣ್ಣುಗಳಲ್ಲಿ ನೀರು ಮಿಡಿಯಿತು ಅಷ್ಟೆ.''

ಈ ರಾಜ ರಿಪುಂಜಯನ ಮಗನೆಂದು ಆ ಮುದುಕನಿಗೆ ತಿಳಿಯಲಿಲ್ಲ. ರಾಜನು ಕೆಲವು ಕಾಲ ಲೋಕಾಭಿರಾಮವಾಗಿ ಶಬರನಾಯಕನೊಂದಿಗೆ ಮಾತನಾಡುತ್ತಿದ್ದು ಆದರದಿಂದ ಅವನನ್ನೂ ಅವನ ಸೊಸೆಯನ್ನೂ ಬೀಳ್ಕೊಟ್ಟು ತಾನೂ ರಾಣಿಯೊಂದಿಗೆ ತನ್ನ ಬಿಡಾರಕ್ಕೆ ಹಿಂದಿರುಗಿದನು. ರಾಜ ರಾಣಿಯರು ಅದೇ ಆಶ್ರಮದಲ್ಲಿ ಇನ್ನಷ್ಟು ಕಾಲ ತಂಗುವ ಮನಸ್ಸು ಮಾಡಿದರು. ಅಲ್ಲಿಯೇ ಇದ್ದಾಗ ಒಂದು ದಿನ ಶಬರ ಕನ್ನಿಕೆ ವಿಂಧ್ಯಸೇನೆ ತನ್ನ ಗಂಡ ವ್ಯಾಘ್ರದಮನನ್ನು ಕರೆದುಕೊಂಡು ರಾಣಿಯ ಬಳಿ ಬಂದಳು. ರಾಜನೂ ರಾಣಿಯೂ ಈ ಶಬರ ದಂಪತಿಗಳನ್ನು ವಿಶ್ವಾಸದಿಂದ ಬರಮಾಡಿಕೊಂಡು ಸತ್ಕರಿಸಿದರು. ಈ ಕಾಡುಜನರ ಸರಳ ಸ್ವಭಾವ, ಗಾಂಭೀರ್ಯ, ನಿಷ್ಕಪಟ ಪ್ರೇಮ, ಅವ್ಯಾಜ ಅನುರಾಗ, ಇವುಗಳನ್ನು ರಾಜ ರಾಣಿಯರು ಬಹುವಾಗಿ ಮೆಚ್ಚಿಕೊಂಡರು. ವಿಂಧ್ಯಸೇನೆಯ ಮೇಲೆ ರಾಣಿಗೆ ವಿಶೇಷವಾದ ವಾತ್ಸಲ್ಯ ಹುಟ್ಟಿತು. ರಾಜ ರಾಣಿಯರು ಆ ಪ್ರದೇಶದಲ್ಲಿಯೇ ಹಲವಾರು ತಿಂಗಳುಗಳು ನೆಲೆಸಿದರಾಗಿ ಶಬರ ದಂಪತಿಗಳಿಗೂ ಅವರಿಗೂ ಗಾಢವಾದ ಮೈತ್ರಿ ಬೆಳೆಯಿತು.

ಗುಹಾಲಯವನ್ನು ಸಂದರ್ಶಿಸಿದ ಫಲವಾಗಿ ರಾಣಿ ಗರ್ಭತಳೆದಳು. ನವಮಾಸಗಳನ್ನು ಸುಖವಾಗಿ ಕಳೆದು ಒಂದು ಶುಭ ಲಗ್ನದಲ್ಲಿ ಗಂಡು ಮಗುವನ್ನು ಹೆತ್ತಳು. ಮಗುವಿನ ಜಾತಕ ಪ್ರಶಸ್ತವಾಗಿದ್ದು ಜೋಯಿಸರು ಮಗುವಿಗೆ ಚಕ್ರವರ್ತಿಯೋಗವಿದೆಯೆಂದು ಸೂಚಿಸಿದರು. ಮಹಾಲಕ್ಷಣಗಳಿಂದ ಕೂಡಿದ ಈ ಮಗುವಿಗೆ ರಾಜವಾಹನನೆಂದು ನಾಮಕರಣಮಾಡಿದರು. ಇದೇ ಸಮಯದಲ್ಲಿಯೇ ಶಬರ ಕನ್ನಿಕೆಯಾದ ವಿಂಧ್ಯ ಸೇನೆಯೂ ಗಂಡು ಮಗುವೊಂದನ್ನು ಹೆತ್ತಳು ; ಈ ಮಗುವಿಗೆ ಸಿಂಹದಮನನೆಂದು ಹೆಸರಿಟ್ಟರು. ಮಗು ಹುಟ್ಟಿದ ಮರುದಿನವೇ ವಿಂಧ್ಯಸೇನೆ ಮಗುವನ್ನು ಬಗಲಿನಲ್ಲಿ ಎತ್ತಿಕೊಂಡು ರಾಣಿಯನ್ನೂ ರಾಜಕುಮಾರನನ್ನೂ ನೋಡಲು ಬಂದಳು. ರಾಣಿಯನ್ನು ನೋಡುವ ತವಕ ಈ ಹುಡುಗಿಗೆ ಅಷ್ಟಿದ್ದಿತು. ರಾಣಿಯೂ ವಿಂಧ್ಯಸೇನೆಯನ್ನು ನೋಡಲು ಕಾತರಳಾಗಿದ್ದಳು. ಅವರಿಬ್ಬರಲ್ಲಿ ಅನುರಾಗ ಅಷ್ಟೊಂದು ಬೆಳೆದಿದ್ದಿತು.

ರಾಣಿಯ ಜೊತೆಯಲ್ಲಿ ಗುಹಾಲಯಕ್ಕೆ ಹೋಗಿದ್ದವರಲ್ಲಿ , ಪ್ರಧಾನ ಸಚಿವ ಸುಮತಿಯ ಹೆಂಡತಿ, ಇನ್ನೊಬ್ಬ ಸಚಿವ ಸುಶ್ರುತನ ಹೆಂಡತಿ, ಮತ್ತೊಬ್ಬ ಸಚಿವ ಸುಮಂತ್ರನ ಹೆಂಡತಿ, ಪುರೋಹಿತನಾದ ಸೋಮದತ್ತನ ಹೆಂಡತಿ ಇವರೂ ಇದ್ದರು. ಗುಹಸ್ವಾಮಿ ಕಟಾಕ್ಷದ ಪ್ರಭಾವದಿಂದ ಇವರೂ ಗರ್ಭ ತಳೆದು ಕಾಲಕ್ರಮದಲ್ಲಿ ಮಕ್ಕಳನ್ನು ಪಡೆದರು. ಅವೂ ಗಂಡು ಮಕ್ಕಳೇ; ಕ್ರಮವಾಗಿ ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ಬ್ರಹ್ಮದತ್ತ ಎಂದು ಅವರಿಗೆ ಹೆಸರಿಟ್ಟರು.

ಹೀಗಿರಲು ಒಂದು ದಿನ ಮುಂಜಾನೆ ವಿಂಧ್ಯಸೇನೆ ಯಾವುದೋ ಮಗುವನ್ನೆತ್ತಿಕೊಂಡು ರಾಣೀ ವಾಸಕ್ಕೆ ಬಂದಳು. ಅವಳ ಜೊತೆಯಲ್ಲಿ ಹಣ್ಣು ಹಣ್ಣು ಮುದುಕನೊಬ್ಬನೂ ಬಂದಿದ್ದನು; ಅವನೂ ಶಬರನೇ. ಆ ಸಮಯ ರಾಣೀವಾಸದಲ್ಲಿ ರಾಜನೂ ಇದ್ದನಾಗಿ ವಿಂಧ್ಯಸೇನೆ ವೃದ್ಧ ಶಬರನ

ಪರಿಚಯವನ್ನು ರಾಜನಿಗೆ ಮಾಡಿಕೊಟ್ಟಳು. ಅದೇ ಕಾಡಿನಲ್ಲಿಯೇ, ರಾಜನ ಬಿಡದಿಗೆ ಸ್ವಲ್ಪ ದೂರದಲ್ಲೇ ವಾಸಮಾಡುತ್ತಿದ್ದ ಸಾರ್ಥಮರ್ದನ ಎಂಬ ಕಿರಾತನ ಸೋದರಮಾವ ಈ ಮುದುಕ. ಇವನ ಹೆಸರು ಅಲಾತಚಕ್ರ. ಸಾರ್ಥಮರ್ದನ ವಿಂಧ್ಯಸೇನೆಯ ಚಿಕ್ಕಮ್ಮನ ಗಂಡ. ವಿಂಧ್ಯಸೇನೆ ಎತ್ತಿಕೊಂಡಿದ್ದ ಮಗು ಕಳೆಕಳೆಯಾಗಿ ಸುಂದರವಾಗಿದ್ದಿತು; ಶಬರ ಕುಲಕ್ಕೆ ಸೇರಿದಂತೆ ಕಾಣುತ್ತಿರಲಿಲ್ಲ. ಮಗುವಿನ ಮುಖದಲ್ಲಿ ರಾಜ ಸಹಜವಾದ ತೇಜಸ್ಸಿದ್ದುದನ್ನು ರಾಜಹಂಸ ಗಮನಿಸಿ "ಈ ಮಗು ಯಾರದು?" ಎಂದು ಕುತೂಹಲದಿಂದ ಕೇಳಿದನು. ವಿಂಧ್ಯಸೇನೆ ವೃದ್ಧ ಶಬರ ಅಲಾತಚಕ್ರನ ಕಡೆ ನೋಡಿದಳು. ಅವನು ಮುಂದೆ ಬಂದು, ನಡು ಬಗ್ಗಿಸಿ, ಭೂಮಿ ಮುಟ್ಟಿ ರಾಜನಿಗೆ ನಮಸ್ಕರಿಸಿ ಮಗುವಿನ ಕಥೆಯನ್ನು ಹೇಳಲು ಮೊದಲು ಮಾಡಿದನು.

ಅಪಹಾರವರ್ಮನ ಕಥೆ

ವೃದ್ಧಶಬರ ಅಲಾತಚಕ್ರನು ಹೇಳಿದ ಕಥೆ ಇದು -

"ಈ ಕಾಡಿನಲ್ಲಿ ಒಮ್ಮೆ ಕಿರಾತ ನಾಯಕರಾದ ನಾವೆಲ್ಲ ತಿರುಗಾಡುತ್ತಿದ್ದಾಗ ಮಿಥಿಲೆಯ ರಾಜ ಅಲ್ಲಿಗೆ ಬಂದಿದ್ದನೆಂಬ ಸುದ್ದಿ ಬಂದಿತು. ಯಾವುದೋ ಪ್ರಯಾಣದ ನಡುವೆ ಈ ಕಾಡನ್ನು ದಾಟುತ್ತಿದ್ದ ರಾಜನನ್ನೂ, ಅವನ ಪರಿವಾರವನ್ನೂ ನಾವು ಅಡ್ಡಗಟ್ಟಿದೆವು. ನಾವೆಲ್ಲ ಸಶಸ್ತ್ರರಾಗಿ ಸುಸಜ್ಜಿತರಾಗಿದ್ದೆವು; ರಾಜನ ಪರಿವಾರ ಮಿತವಾಗಿದ್ದಿತು. ನಮ್ಮ ನಡುವೆ ನಡೆದ ಹೋರಾಟದಲ್ಲಿ ರಾಜನ ಸೇನೆ ಹಿಮ್ಮೆಟ್ಟಿತು. ಆದರೂ ರಾಜನು ಧೃತಿಗೆಡದೇ ಕಾದಾಡಿದನು. ಆದರೇನು? ನಮ್ಮ ಪೆಟ್ಟನ್ನು ತಡೆಯಲಾರದೆ ಅವನೂ ಓಡಿಹೋಗಬೇಕಾಯಿತು. ನಮ್ಮ ಕಿರಾತ ಸೇನೆಯ ಅಧಿಪತಿಯು ರಾಜನ ಬೆನ್ನಟ್ಟಿ ಹೋದನು; ಗಾಯಗೊಂಡು ಬಿದ್ದಿದ್ದ ರಾಜ ಪರಿವಾರದವರ ಆಭರಣಗಳನ್ನೂ ವಸ್ತ್ರಗಳನ್ನೂ ಕಳಚಿಕೊಳ್ಳುವ, ಓಡಿಹೋದವರು ಬಿಟ್ಟು ಹೋದ ನಗನಾಣ್ಯಗಳನ್ನು ದೋಚಿಕೊಳ್ಳುವ ಕೆಲಸ ನನ್ನ ಪಾಲಿಗೆ ಬಂದಿತು. ಈ ಕೆಲಸವನ್ನು ಮುಗಿಸಿ ನಾನು ಹಿಂದಿರುಗುವ ಸಮಯದಲ್ಲಿ ಯಾವುದೋ ಮಗು ಅಳುವ ಶಬ್ಧ ಕೇಳಿತು. ನಾನು ಆ ದಿಕ್ಕಿನಲ್ಲಿ ನೋಡಲು, ಸುಂದರ ಯುವತಿಯೊಬ್ಬಳು ಮೈಯೆಲ್ಲ ಗಾಸಿಗೊಂಡು ಬಿದ್ದಿದ್ದಳು. ನಾನು ಅವಳನ್ನು ಸಮೀಪಿಸಲು ಆಕೆ 'ದಯಮಾಡಿ ರಾಜಕುಮಾರನನ್ನು ರಕ್ಷಸು.' ಎಂದು ಬೇಡಿಕೊಂಡಳು. ಅವಳ ದನಿ ಕುಗ್ಗಿದ್ದಿತು; ಕಷ್ಟದಿಂದ ಕೈಯನ್ನೆತ್ತಿ, ಸತ್ತು ಬಿದ್ದಿದ್ದ ಆನೆಯೊಂದರ ಕಡೆ ಬೆರಳು ಮಾಡಿದಳು. ನಾನು ಆನೆಯ ಬಳಿ ಹೋಗಿ

ನೋಡಲು, ಆನೆಯ ಕಿವಿಯ ಬಳಿ ಮಗು ಸಿಕ್ಕಿಕೊಂಡು ಒದ್ದಾಡುತ್ತಿದ್ದಿತು. ಅದೃಷ್ಟದಿಂದ ಮಗುವಿಗೆ ಏನೊಂದು ಗಾಯವೂ ಆಗಿರಲಿಲ್ಲ. ಮಗುವನ್ನು ಎತ್ತಿಕೊಂಡು ಈ ಹೆಂಗಸಿನ ಬಳಿ ಬಂದು 'ನೀನು ಯಾರು ? ಇಲ್ಲಿಗೆ ಬಂದುದು ಹೇಗೆ ? ಈ ಮಗುಯಾರದ್ದು ? ' ಎಂದು ಕೇಳಿದೆ.

ಉತ್ತರವಾಗಿ ಆ ಯುವತಿ ಹೀಗೆ ಹೇಳಿದಳು, – 'ವಿದೇಹದ ಅರಸು ಪ್ರಹಾರವರ್ಮನ ಹೆಸರನ್ನು ಕೇಳಿದ್ದೀರಾ ?' ಅವನ ಮಿತ್ರ ಮಗಧರಾಜ ರಾಜಹಂಸನ ಹೆಸರೂ ನಿಮಗೆ ತಿಳಿದಿರಬೇಕು. ಈ ರಾಜರ ಮಡದಿಯರು ತುಂಬ ಸ್ನೇಹಿತರು.

ಮಗಧ ರಾಜನ ರಾಣಿ ಗರ್ಭವತಿಯಾಗಿದ್ದಾಗ ಆಕೆಯನ್ನು ನೋಡಿ ಬರಲು ವಿದೇಹದ ರಾಣಿ ತನ್ನ ಒಡೆಯನೊಂದಿಗೆ ಮಗಧ ದೇಶಕ್ಕೆ ಹೊರಟಳು. ಈ ಸಮಯಕ್ಕೆ ಸರಿಯಾಗಿ ಮಗಧ ರಾಜನಿಗೂ, ಮಾಳವ ರಾಜನಿಗೂ ಯುದ್ಧ ಆರಂಭವಾಯಿತು. ವಿದೇಹರಾಜನೂ ಅಂಗಾಧಿಪತಿಯೂ ಮಗಧರಾಜನಿಗೆ ನೆರವಾಗಿ ನಿಂತರು. ಆದರೆ ಶತ್ರುಗಳ ಬಲದಮುಂದೆ ಇವರು ನಿಲ್ಲಲಾಗಲಿಲ್ಲ; ವಿದೇಹ ರಾಜನಾದ ಪ್ರಹಾರವರ್ಮ ಬಾಣಗಳ ಬಲೆಯಲ್ಲಿ ಸಿಕ್ಕು ಬಿದ್ದು ಸಂಕಟಪಟ್ಟ . ಮಗಧ ರಾಜ ಶೌರ್ಯದಿಂದ ಮುನ್ನುಗ್ಗಿ ಪ್ರಹಾರನನ್ನು ಈ ಸೆರೆಯಿಂದ ಬಿಡಿಸಿದನು; ಅಷ್ಟರಲ್ಲಿ ಎಲ್ಲಿಂದಲೋ ಬಂದ ಪ್ರಬಲವಾದ ಗದಾಘಾತದಿಂದ ರಾಜಹಂಸನು ಪ್ರಜ್ಞೆತಪ್ಪಿ ಕೆಳಗುರುಳಿದನು.

ನಿಜವಾಗಿ ಮಾಳವದ ಅರಸು ಮಾನಸಾರನೇ ಗೆದ್ದವನಾದರೂ ಅವನು ಮಗಧ ರಾಜನ ಶೌರ್ಯವನ್ನು ಮೆಚ್ಚಿಕೊಂಡು, ಅವನೇ ಸಮರದಲ್ಲಿ ವಿಜಯವನ್ನು ಸಾಧಿಸಿದ ವೀರನೆಂದು ತುಂಬಿದ ಸಭೆಯಲ್ಲಿ ಘೋಷಿಸಿ, ಇನ್ನು ಮುಂದೆ ತಾನು ಯಾರ ಮೇಲೂ ಕತ್ತಿಯೆತ್ತುವುದಿಲ್ಲವೆಂದು ಶಪಥ ಮಾಡಿದನು; ಗಾಸಿಗೊಂಡಿದ್ದ ಪ್ರಹಾರವರ್ಮನನ್ನು ತನ್ನ ಕೈಯಿಂದಲೇ ಸಂತೈಸಿ ಉಪಚರಿಸಿದನು. ತನ್ನ ದೇಶದಲ್ಲಿಯೇ ಪ್ರಹಾರವರ್ಮನನ್ನು

ಬಹುಕಾಲ ಉಳಿಸಿಕೊಂಡು ಸತ್ಕರಿಸಿದನು. ಮಾಳವ ರಾಜನ ಅತಿಥಿಯಾಗಿದ್ದಾಗಲೇ ಪ್ರಹಾರನಿಗೆ ಅವಳಿಜವಳಿ ಮಕ್ಕಳಾದರು. ಮಾನಸಾರ ರಾಜನು ಈ ಸಂದರ್ಭದಲ್ಲಿ ವಿಶ್ವಜಿದ್ಯಾಗವನ್ನು ನಡೆಸಿ, ತಾನು ಮಗಧರಾಜನಿಂದ ವಶಪಡಿಸಿಕೊಂಡಿದ್ದ ಭದ್ರವಾಹನವೆಂಬ ಅಶ್ವರತ್ನವನ್ನು ಬಹುಮಾನವಾಗಿ ಪ್ರಹಾರನಿಗೆ ಸಮರ್ಪಿಸಿದನು. ಇದಾದಮೇಲೆ ಪ್ರಹಾರವರ್ಮನು ತನ್ನೊಂದಿಗೇ ಉಳಿದಿದ್ದ ಅಂಗಾಧಿಪತಿಯೊಡಗೂಡಿ ತನ್ನ ದೇಶಕ್ಕೆ ಹೊರಟನು. ದಾರಿಯಲ್ಲಿ ಅಂಗದೇಶದ ರಾಜಧಾನಿಯಾದ ಚಂಪಾನಗರಿಯಲ್ಲಿ ಕೆಲಕಾಲ ತಂಗಿದ್ದನು. ಇಲ್ಲಿದ್ದಾಗ, ತನ್ನ ತಮ್ಮ ಸಂಹಾರವರ್ಮನ ಮಗ ವಿಕಟವರ್ಮನು ತನ್ನ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದಾನೆನ್ನುವ ವಾರ್ತೆ ಬಂದಿತು. ತನ್ನ ರಾಜ್ಯವನ್ನು ಮರಳಿ ಪಡೆಯುವ ಸಲುವಾಗಿ ತನ್ನ ತಂಗಿಯ ಮಗ ಸುಂಹನ ನೆರವನ್ನು ಪಡೆಯಲು ನಿಶ್ಚಯಿಸಿದನು. ಆಗ ಸುಂಹನು ವಿಂಧ್ಯ ಪ್ರದೇಶದ ಕಾಡುಜನರನ್ನು ಅಡಗಿಸಲೆಂದು ಈ ಕಾಡಿನಲ್ಲಿ ಬೀಡುಬಿಟ್ಟಿದ್ದನು. ಅವನನ್ನು ಹುಡುಕುತ್ತ ವಿದೇಹದ ಅರಸು ಪ್ರಹಾರವರ್ಮನು ಈ ಕಾಡಿಗೆ ಬಂದಿದ್ದನು. ಕಿರಾತರು ಅವನ ಮೇಲೆ ಬಿದ್ದು ಅವನ ಪರಿಜನರನ್ನು ಹಿಂಸಿಸಿ ಅವನನ್ನು ಓಡಿಸಿದರು. ಅವನ ಇಬ್ಬರು ಮಕ್ಕಳಲ್ಲಿ ಒಂದನ್ನು ನನ್ನ ತಾಯಿ ಕಾಪಾಡುವ ಸಲುವಾಗಿ ಕೊಂಡುಹೋದಳು ; ದೊಡ್ಡ ಮಗುವಾದ ಇದನ್ನು ನನ್ನ ವಶದಲ್ಲಿ ಬಿಟ್ಟಳು. ಇದನ್ನು ಎತ್ತಿಕೊಂಡು ಬರುತ್ತಿರುವಾಗ ಪಳಗಿದ ಆನೆಯೊಂದು ವಿಶ್ವಾಸದಿಂದ ನನ್ನ ಬಳಿ ಬಂದಿತು; ಮಗು ಅದನ್ನೇರಿ ಸವಾರಿಮಾಡಬೇಕೆಂದು ಕೇಳಿತು. ಪೂರ್ವಾಪರ ಆಲೋಚನೆಯಿಲ್ಲದೆ ನಾನು ಮಗುವನ್ನೆತ್ತಿ ಆನೆಯ ತಲೆಯ ಮೇಲೆ ಕುಳ್ಳಿರಿಸಿದೆ. ಅಷ್ಟರಲ್ಲಿ ಶತ್ರುಗಳಾದ ಕಿರಾತರು ಮುನ್ನುಗ್ಗಿ ಬಂದು ನನ್ನನ್ನು ಹೊಡೆದು ಬಡಿದು ಗಾಯಗೊಳಿಸಿ ಆನೆಯನ್ನು ಕೊಂದು ಉರುಳಿಸಿದರು. ಮಗು ಕೆಳಗೆ ಬಿದ್ದುದನ್ನು ನೋಡಿದೆ. ಸದ್ಯ ಮಗುವಿಗೆ ಗಾಯವಾಗಿಲ್ಲವಲ್ಲ!'

ಹೀಗೆ ಹೇಳಿ ಹೆಂಗಸು ನಿಟ್ಟುಸಿರುಬಿಟ್ಟು ಪ್ರಾಣ ನೀಗಿದಳು. "ನಾನು ಮಗುವನ್ನು ಎತ್ತಿಕೊಂಡು ನಮ್ಮ ನೆಲೆಗೆ ಹಿಂದಿರುಗಿದೆ. ಅಷ್ಟರಲ್ಲಿ ನಮ್ಮ ಒಡೆಯನು ಪ್ರಹಾರವರ್ಮನನ್ನು ಹತ್ತಿಕ್ಕಿ ಹಿಂದಿರುಗಿ ಬಂದನು. ನನ್ನ ಕೈಲಿದ್ದ ಮಗುವನ್ನು ನೋಡಿ, ಅವನು ಮಗುವನ್ನು ವಿಂಧ್ಯಸೇನೆಯ ವಶಕ್ಕೆ ಒಪ್ಪಿಸುವಂತೆ ಆಜ್ಞಾಪಿಸಿದನು. ನಾನು ಒಡನೆಯೇ ಕುದುರೆಯೊಂದನ್ನು ಏರಿ ಮಗುವನ್ನು ತಂದು ಈಕೆಗೆ ಒಪ್ಪಿಸಿದೆ. ಈಗ ಅದೇ ಮಗುವನ್ನು ನಿಮ್ಮ ಬಳಿಗೆ ತಂದಿದ್ದಾಳೆ. ನೀವು ಅದನ್ನು ಕಾಪಾಡುವ ಹೊಣೆಯನ್ನು ಹೊತ್ತುಕೊಳ್ಳಬೇಕು."

ವೃದ್ಧ ಶಬರ ಅಲಾತಚಕ್ರ ಹೇಳಿದ ಈ ಕಥೆಯನ್ನು ಕೇಳಿ ರಾಜ - ರಾಣಿಯರಿಗೆ ತುಂಬ ದು:ಖವಾಯಿತು. ತನ್ನ ಮಿತ್ರ ಪ್ರಹಾರವರ್ಮನಿಗೆ ಒದಗಿದ ಕಷ್ಟಕೋಟಲೆಗಳು ರಾಜನ ಮನಸ್ಸನ್ನು ಮಿಡಿದವು; ತನ್ನ ಪ್ರಿಯಸ್ನೇಹಿತೆಯಾಗಿದ್ದ ವಿದೇಹ ರಾಣಿ ಪ್ರಿಯಂವದೆಗೆ ಒದಗಿದ ದುಃಖ ಪರಂಪರೆಗಾಗಿ ರಾಣಿ ಮರುಗಿದಳು. ಇಬ್ಬರೂ ಕಣ್ಣೀರಿಟ್ಟು ಕಂಗಾಲಾಗಿರಲು ಅವರನ್ನು ವೃದ್ಧ ಶಬರನು ಪ್ರಹಾರವರ್ಮನ ಪ್ರಾಣಕ್ಕೆ ಸಂಚಕಾರವೇನೂ ಬಂದಿಲ್ಲವೆಂದು ಹೇಳಿ ಸಂತೈಸಿದನು. ರಾಜ ರಾಣಿಯರು ಪ್ರಹಾರವರ್ಮನ ಈ ಮಗುವನ್ನು ಸಂತೋಷದಿಂದ ಸ್ವೀಕರಿಸಿ, ಅದಕ್ಕೆ ಅಪಹಾರವರ್ಮನೆಂದು ಹೆಸರಿಟ್ಟರು. ವೃದ್ಧ ಶಬರನೂ ವಿಂಧ್ಯಸೇನೆಯೂ ಸಮಾಧಾನದಿಂದ ಹಿಂದಿರುಗಿದರು.

ಉಪಹಾರವರ್ಮನ ಕಥೆ

ರಾಜನೂ ರಾಣಿಯೂ ಮಗುವನ್ನೆತ್ತಿಕೊಂಡು ಕುಟೀರದೊಳಗೆ ಹೊರಡಬೇಕೆನ್ನುವಷ್ಟರಲ್ಲಿಯೇ, ತಪಸ್ವಿಯೊಬ್ಬನು ತನ್ನ ಕಂಕುಳಲ್ಲಿ ಮಗುವೊಂದನ್ನೇರಿಸಿಕೊಂಡು ಬಂದನು. ಈ ಮಗುವು ವೃದ್ಧ ಶಬರನು ಕರೆದುಕೊಂಡು ಬಂದು ಬಿಟ್ಟು ಹೋದ ಮಗುವಿನ ಹಾಗೆಯೇ ಇದ್ದುದನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು. ತಮ್ಮ ಬಳಿ ಬಂದ ತಪಸ್ವಿಯನ್ನು ಸ್ವಾಗತಿಸಿ ಸತ್ಕರಿಸಿದ ನಂತರ ಈ ಮಗು ಯಾರೆಂದು ರಾಜನು ಕೇಳಲು ತಪಸ್ವಿಯು ಹೀಗೆ ಹೇಳಿದನು.

“ನಾನು ಗಂಗಾ ಮೂಲಕ್ಕೆ ಯಾತ್ರೆ ಹೋಗಿ ಹಿಂದಿರುಗಿ ಬರುವಾಗ ದಾರಿಯಲ್ಲಿ ಒಂದು ಗೊಂಡಾರಣ್ಯವನ್ನು ಸೇರಿದೆನು. ಅರಣ್ಯದ ನಡುವೆ ಸಣ್ಣದೊಂದು ಹಳ್ಳಿಯಿದ್ದಿತು. ಕ್ರೂರ ಮೃಗಗಳ ಹಾವಳಿ ಇಲ್ಲಿ ಹೇಳತೀರದು. ಅಲ್ಲಿನ ಕಾಡು ಜನಕ್ಕೆ ಏನೋ ವಿಚಿತ್ರ ವ್ಯಾಧಿ ಸೋಂಕಿ ಅವರೆಲ್ಲ ನರಳುತ್ತಿದ್ದರು. ಆ ಹಳ್ಳಿಯ ಬಳಿ ನಾನು ಸುತ್ತಾಡುತ್ತಿದ್ದಾಗ ದೂರದಲ್ಲಿ ಮುದುಕಿಯೊಬ್ಬಳು ಮೈಯೆಲ್ಲ ಗಾಯಗೊಂಡು ರಕ್ತ ಸುರಿಸುತ್ತ ಬಿದ್ದಿದ್ದುದನ್ನು ನೋಡಿದೆ. ಅವಳ ಬಳಿ ಹೋಗಿ ಇದೇನು ಕಾರಣವೆಂದು ಕೇಳಲು ಆಕೆ – ‘ಸ್ವಾಮಿ, ನಾನು ವಿದೇಹ ರಾಜನ ಊಳಿಗಕ್ಕೆ ಸೇರಿದವಳು. ವಿಂಧ್ಯದ ವನದಲ್ಲಿ ಒಮ್ಮೆ ಈ ರಾಜ ಹೋಗುತ್ತಿದ್ದಾಗ ಕಿರಾತರು ಅಡ್ಡಗಟ್ಟಿದರು. ಪರಿಜನರಿಂದ ನಾನು ಹೇಗೋ ದೂರವಾಗಿ ರಾಜನ ಮಗುವನ್ನು ಕಾಪಾಡಬೇಕೆಂದು ಕಿರಾತರ ಹಾವಳಿಯಿಂದ ಪಾರಾಗಿ ಅಲ್ಲಲ್ಲಿ ಸುತ್ತಾಡುತ್ತ ಇಲ್ಲಿಗೆ ಬಂದೆ. ತಿರುಗಾಟದ ಆಯಾಸವನ್ನು

ಪರಿಹರಿಸಿಕೊಳ್ಳಲು ಈ ಮರದ ಕೆಳಗೆ ಮಗುವನ್ನು ಮಲಗಿಸಿ ನಾನು ಕುಳಿತೆ. ಅಷ್ಟರಲ್ಲಿ ಹುಲಿಯೊಂದು ಎತ್ತಣಿಂದಲೋ ಹಾರಿಬಂದು ನನ್ನ ಮೇಲೆ ಬಿದ್ದಿತು. ಮಗುವನ್ನು ಉಳಿಸಬೇಕೆಂದು ನಾನು ಮುಂದಾಗಿ ಬರಲು ಹುಲಿ ನನ್ನನ್ನು ಕಚ್ಚಿ ಪರಚಿ ಗಾಸಿಮಾಡಿತು. ಅಷ್ಟರಲ್ಲಿ ಕಿರಾತರು ಬಂದು ಹುಲಿಯನ್ನು ಕೊಂದರು. ಅವರು ಹೋಗುವಾಗ ಸತ್ತ ಹುಲಿಯೊಂದಿಗೆ ನನ್ನ ವಶದಲ್ಲಿದ್ದ ಮಗುವನ್ನೂ ಎತ್ತಿಕೊಂಡು ಹೋಗಿಬಿಟ್ಟರು. ಮಗುವಿನ ಗತಿ ಏನಾಗಿದೆಯೋ ! ದಯಮಾಡಿ ಮಗುವನ್ನು ಉಳಿಸಿ ! ಈ ಮಗುವಿನ ಅಣ್ಣನನ್ನು ನನ್ನ ಮಗಳ ವಶದಲ್ಲಿ ಬಿಟ್ಟಿದ್ದೆ; ಅದರ ಗತಿ ಏನಾಗಿದೆಯೋ ತಿಳಿಯದು –' ಎಂದು ಗೋಳಿಟ್ಟಳು. ನಾನು ಆಕೆಗೆ ಸಮಾಧಾನ ಹೇಳಿ ಮಗುವನ್ನು ಅರಸಿಕೊಂಡು ಹೊರಟೆ. ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ವಿಂಧ್ಯವಾಸಿನಿಯ ಗುಡಿಯ ಮುಂದೆ ಕಿರಾತರ ಗುಂಪೊಂದು ನೆರೆದಿದ್ದುದನ್ನು ಕಂಡೆ. ಆ ಮುದುಕಿಯಿಂದ ತಂದ ಮಗುವನ್ನು ಅವರು ದೇವಿಗೆ ಬಲಿ ಕೊಡಲು ಹವಣಿಸುತ್ತಿದ್ದರು. ಬಲಿ ಕೊಡುವ ವಿಧಾನದ ಬಗ್ಗೆ ಚರ್ಚೆ ನಡೆಯುತ್ತಿದ್ದಿತು. ಸಂದರ್ಭವನ್ನು ಅರಿತ ನಾನು ಅವರ ಬಳಿ ಹೋಗಿ, 'ದೇವಿಗೆ ಅನರ್ಘ್ಯವಾದ ಕಾಣಿಕೆಯನ್ನು ತಂದಿದ್ದೀರಿ ! ಇದನ್ನು ಸಮರ್ಪಿಸುವ ವಿಧಾನ ನನಗೆ ಗೊತ್ತು. ನೀವು ಚರ್ಚೆ ಮಾಡುವ ಅಗತ್ಯವಿಲ್ಲ' ಎನ್ನಲು ಅವರೆಲ್ಲ ಒಪ್ಪಿದರು. ನಾನು ಹೇಳಿದ ವಿಧಾನ ಇದು –' ಮಗುವನ್ನು ಸಿಂಗರಿಸಿ ರಾತ್ರಿಯ ವೇಳೆ ದೇವಿಯ ಮುಂದೆ ಇರಿಸಿ, ಹಳ್ಳಿಗೆ ಬಂದಿರುವ ಮಾರಿಯನ್ನು ತೊಲಗಿಸುವಂತೆ ಬೇಡಿಕೊಳ್ಳಿ. ದೇವಿ 'ನಾನು ಪ್ರಸನ್ನಳಾಗಿದ್ದೇನೆ. ಇನ್ನು ಮುಂದೆ ನಿಮಗೆ ಆತಂಕವಿಲ್ಲ' ಎನ್ನುತ್ತಲೇ ನೀವೆಲ್ಲ ಹಿಂದೆ ನೋಡದೆ ನಿಂನಿಮ್ಮ ಮನೆಗಳಿಗೆ ಹೊರಟುಹೋಗಬೇಕು. ಹಿಂದಿರುಗಿ ನೋಡಿದರೆ ವಿಪತ್ತು ತಪ್ಪಿದ್ದಲ್ಲ'.

ಕಿರಾತರೆಲ್ಲರೂ ಇದಕ್ಕೆ ಒಪ್ಪಿದರು. ಆ ರಾತ್ರಿ ಸರಿ ಹೊತ್ತಿನಲ್ಲಿ ಕಿರಾತರು ಮಗುವನ್ನು ಅಲಂಕರಿಸಿ ಗುಡಿಗೆ ತಂದರು. ಆ ವೇಳೆಗಾಗಲೇ ನಾನು ಗುಟ್ಟಾಗಿ ದೇವೀ ವಿಗ್ರಹದ ಹಿಂದೆ ಅಡಗಿ ಕುಳಿತಿದ್ದೆ. ಕಿರಾತರ ಗುಂಪಿನಿಂದ

ಪೂಜಾರಿಯು ಮುಂದೆ ಬಂದು ಮಗುವನ್ನು ದೇವಿಯ ಪಾದಗಳ ಬಳಿ ಇರಿಸಿ ಕುಂಕುಮದಿಂದಲೂ ಧೂಪ ದೀಪಗಳಿಂದಲೂ ಪೂಜಿಸಿದ; ಅವರ ಭಾಷೆಯಲ್ಲಿಯೇ ಮಂತ್ರಗಳನ್ನು ಪಠಿಸಿದ. ಇದಾದ ನಂತರ ಅಭ್ಯಾಸ ಬಲದಿಂದ ಮಗುವನ್ನು ಕೊಲ್ಲಲು ತನ್ನ ಕತ್ತಿಯನ್ನು ಹಿರಿದ. ಒಡನೆಯೇ ನಾನು ಜಗ್ಗನೆದ್ದು ದೇವಿಯೇ ಹೇಳಿದಂತೆ 'ಹೋಗಿರಿ, ನಿಮ್ಮ ಕಷ್ಟಗಳು ಹೋಗುತ್ತವೆ !' ಎಂದು ಕೂಗಿಕೊಂಡು ಮಗುವನ್ನೆತ್ತಿಕೊಂಡೆ. ಪೂಜಾರಿಯೂ ಉಳಿದ ಕಿರಾತರೂ ಸಮಾಧಾನದಿಂದ ಹಿಂದಿರುಗಿ ನೋಡದೆ ಓಡಿಹೋದರು. ನಾನೂ ಮಗುವನ್ನೆತ್ತಿಕೊಂಡು ಗುಡಿಯಿಂದ ಹೊರಬಿದ್ದು ಹಳ್ಳಿಯವರ ಕಣ್ಣು ತಪ್ಪಿಸಿ ರಾತ್ರಿಯೇ ಹತ್ತಾರು ಮೈಲಿ ನಡೆದು ಬಂದೆ. ರಾಜನೊಬ್ಬ ಇಲ್ಲಿದ್ದಾನೆಂದು ತಿಳಿದು ಎಲ್ಲ ಪ್ರಜೆಗಳ ಒಡೆಯ ಅವನೇ ಆದುದರಿಂದ ಈ ಮಗುವನ್ನು ಅವನ ವಶಕ್ಕೆ ಒಪ್ಪಿಸೋಣವೆಂದು ಬಂದೆ. ನೀನು ಒಪ್ಪಿಸಿಕೋ, ಮಗುವನ್ನು ಕಾಪಾಡಿ ಪುಣ್ಯ ಕಟ್ಟಿಕೋ !''

ಎಂದು ತಪಸ್ವಿ ಹೇಳಿ ಮಗುವನ್ನು ರಾಜನ ಬಳಿ ಬಿಟ್ಟು ಹೊರಟುಹೋದನು. ರಾಜನು ಈ ಮಗುವಿಗೆ ಉಪಹಾರವರ್ಮ ಎಂದು ಹೆಸರಿಟ್ಟನು. ತನ್ನ ಮಿತ್ರನಾದ ಪ್ರಹಾರವರ್ಮನ ಇಬ್ಬರೂ ಮಕ್ಕಳು ಹೀಗೆ ತನ್ನ ವಶಕ್ಕೆ ಬಂದುದು ವಿಧಿಯ ವೈಚಿತ್ರ್ಯವೆಂದು ರಾಜನಿಗೆ ಆಶ್ಚರ್ಯವೂ ಸಂತೋಷವೂ ಆಯಿತು. 'ನನ್ನ ಇತರ ಮಿತ್ರರಾದ ರತ್ನೋದ್ಭವ, ಕಾಮಪಾಲ, ಸತ್ಯಶರ್ಮ ಇವರು ಏನಾದರೋ !'ಎಂದು ರಾಜನು ಉದ್ಗಾರ ತೆಗೆಯಲು ರಾಣಿ 'ಅವರು ಯಾರು ?' ಎಂದು ಕೇಳಿದಳು. ರಾಜನು ಉತ್ತರವಾಗಿ ಮುಂದಿನ ಕಥೆಯನ್ನು ಹೇಳಿದನು.

ಪೋತಪನ ಕಥೆ

ಇದು ರಾಜ ಹೇಳಿದ ಕಥೆ -

“ನನ್ನ ತಂದೆಗೆ ಮೂವರು ಮಂತ್ರಿಗಳು- ಮತಿಶರ್ಮ, ಧರ್ಮಪಾಲ, ಪದ್ಮೋದ್ಭವ. ಮೊದಲ ಇಬ್ಬರು ಬ್ರಾಹ್ಮಣರು ; ಮೂರನೆಯವನು ವೈಶ್ಯ. ವೈವಸ್ವತ ಮನುವಿನ ವಂಶದಲ್ಲಿ ನಾಭಾನೇದಿಷ್ಠನ ಸಂತತಿಯಲ್ಲಿ ಬಂದ ಪದ್ಮೋದ್ಭವನ ಹಿರಿಯರಲ್ಲಿ ಪೋತಪ ಎಂಬುವನು ಪ್ರಸಿದ್ಧ. ನಮ್ಮ ತಂದೆ ರಿಪುಂಜಯರಾಜ ಈ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಸಮಯದಲ್ಲಿ ಚಾಣಕ್ಯನು ನಂದರ ಸಿಂಹಾಸನದ ಮೇಲೆ ಚಂದ್ರಗುಪ್ತ ಮೌರ್ಯನನ್ನು ಕೂರಿಸಿದನಷ್ಟೇ. ಚಂದ್ರಗುಪ್ತನ ಆಸ್ಥಾನಕ್ಕೆ ಒಮ್ಮೆ ಈ ಪೋತಪನು ಬೆಲೆಬಾಳುವ ಮುತ್ತು ರತ್ನಗಳನ್ನು ವ್ಯಾಪಾರಕ್ಕೆಂದು ತಂದನು. ಆತ ತಂದಿದ್ದ ಆಭರಣಗಳಲ್ಲಿ ಒಂದು ರತ್ನಹಾರದ ಮೇಲೆ ಚಂದ್ರಗುಪ್ತನ ಮನಸಾಯಿತು. ಅದನ್ನು ವರ್ತಕನು ಪೆಟ್ಟಿಗೆಯಿಂದ ಹೊರ ತೆಗೆದೊಡನೆ ಸಭಾಭವನವೆಲ್ಲ ಬೆಳಕಾಯಿತು. ಕಣ್ಣು ಕೋರೈಸುವಂತಿದ್ದಿತು ಅದರ ಪ್ರಭೆ. ಆದರೆ ತನ್ನ ಆಯ್ಕೆಯನ್ನು ಪ್ರಕಟಮಾಡದೆ, ಚಾಣಕ್ಯನನ್ನು ಕೇಳೋಣ ಎಂದುಕೊಂಡು ರಾಜನು ಪೋತಪನನ್ನು ಮರುದಿನ ಬರುವಂತೆ ಹೇಳಿ ಕಳುಹಿಸಿದನು.

ಪೋತಪನು ಅರಮನೆಯಿಂದ ಹೊರಟು ತನ್ನ ಬಿಡದಿಗೆ ಬರುವ ದಾರಿಯಲ್ಲಿ, ಬಿಸಿಲಿನ ಬೇಗೆಯನ್ನು ತಡೆಯಲಾರದೆ ಅರಿವು ತಪ್ಪಿ ಬಿದ್ದು ಬಿಟ್ಟನು. ಆಗ ಅರಮನೆಗೆ ಊಳಿಗಕ್ಕೆಂದು ಹೋಗುತ್ತಿದ್ದ ವೇಶ್ಯೆಯೊಬ್ಬಳು, ಪೋತಪನು ಪ್ರಜ್ಞೆ ತಪ್ಪಿ ಬಿದ್ದುದನ್ನು ಕಂಡು, ಅವನನ್ನು ಹತ್ತಿರದಲ್ಲಿಯೇ ಇದ್ದ

ತನ್ನ ಮನೆಗೆ ಎತ್ತಿಕೊಂಡು ಹೋಗಿ ಉಪಚರಿಸಿ ಗುಣಪಡಿಸಿದಳು. ಪ್ರಜ್ಞೆತ್ತಿಳಿದೆದ್ದ ಪೋತಪ, ತನ್ನ ಪ್ರಾಣವನ್ನು ಉಳಿಸಿದ ವೇಶ್ಯೆಗೆ ತನ್ನ ಕೃತಜ್ಞತೆಯ ಕುರುಹುವಾಗಿ ತನ್ನಲ್ಲಿದ್ದ ರತ್ನಹಾರವನ್ನು ಕೊಟ್ಟುಬಿಟ್ಟನು. ಆ ರತ್ನಹಾರವು ರಾಜನ ಮನಸ್ಸನ್ನು ಸೆಳಿದಿದ್ದುದು ಅವನಿಗೆ ತಿಳಿಯದು.

ವೇಶ್ಯೆ ಅರಮನೆಗೆ ಹೋಗುವಾಗ ಈ ರತ್ನಹಾರವನ್ನೇ ಧರಿಸಿಕೊಂಡಳು. ಇದನ್ನು ಧರಿಸಿಕೊಂಡು ಓಡಾಡುತ್ತಿದ್ದಾಗ ರಾಜನು ಕಂಡು, ಒಡನೆಯೇ ಪೋತಪನಿಗೆ ಕರೆ ಕಳುಹಿಸಿದನು. ತಾನು ಅಂದು ಮುಂಜಾನೆ ನೋಡಿದ್ದ ರತ್ನಹಾರವನ್ನು ತರುವಂತೆ ಅಪ್ಪಣೆ ಮಾಡಿದನು. ಪೋತಪನು ಆ ರತ್ನಾಹಾರವು ತನ್ನ ಬಳಿಯಲ್ಲಿಲ್ಲವೆಂದೂ, ಅಂದೇ ಮಧ್ಯಾಹ್ನ ತನ್ನ ಪ್ರಾಣವನ್ನುಳಿಸಿದ ಹೆಂಗಸೊಬ್ಬಳಿಗೆ ಕೃತಜ್ಞತೆಯ ಕಾಣಿಕೆಯಾಗಿ ಒಪ್ಪಿಸಿಬಿಟ್ಟೆನೆಂದೂ ಹೇಳಿದನು. ಆದರಷ್ಟೇ ಬೆಲೆಬಾಳುವ ಇತರ ರತ್ನಹಾರಗಳು ತನ್ನ ಬಳಿಯಲ್ಲಿರುವುದಾಗಿ ಅವನು ಹೇಳಿದರೂ ರಾಜನು ತನಗೆ ಅದೇ ಹಾರವೇಬೇಕೆಂದು ಹಟ ಹಿಡಿದನು. ತನ್ನ ಪ್ರಾಣವನ್ನೇ ಉಳಿಸಿದವಳಿಗೆ ತನ್ನಿಂದ ದೊರೆತದ್ದು ತೀರ ಅಲ್ಪ ಕಾಣಿಕೆಯೆಂದೂ, ಸಂಭಾವಿತರು ಇಂಥ ದಾನದ ವಿಚಾರವನ್ನು ಪ್ರಸ್ತಾಪಿಸುವುದಿಲ್ಲವೆಂದೂ ಪೋತಪನು ಹೇಳಿದನು.

ರಾಜನು ದಾನದ ಸಂಧರ್ಭವೆನೆಂದು ಪ್ರಶ್ನಿಸಲು ಪೋತಪನು ಹೀಗೆಂದನು - "ಮಹಾಸ್ವಾಮಿ ಹಲವಾರು ವರ್ಷಗಳ ಹಿಂದೆ ನಾನು ವ್ಯಾಪಾರಕ್ಕಾಗಿ ಮಹೋದಧಿಯನ್ನು ಹಡಗಿನಲ್ಲಿ ದಾಟಿ, ನನ್ನ ಸಂಪತ್ತಿನೊಂದಿಗೆ ಅಂಧಕಚ್ಛ ದೇಶಕ್ಕೆ ಬಂದೆ. ಅಲ್ಲಿನ ಮಹೇಂದ್ರವನದಲ್ಲಿ ಹೋಗುತ್ತಿದ್ದಾಗ ಮನುಷ್ಯನೊಬ್ಬನು ಮರವೊಂದಕ್ಕೆ ನೇತುಬಿದ್ದಿದುದನ್ನು ಕಂಡೆ. ಅವನು ಆತ್ಮಹತ್ಯೆಗೆ ಸಿದ್ಧನಾಗಿರುವ ಕಾರಣವೇನೆಂದು ಪ್ರಶ್ನಿಸಲು 'ಬಡವರಿಗೆ ಮರಣವೇ ಹಬ್ಬ,' ಎಂದುತ್ತರವಿತ್ತನು. ನಾನು ಒಡನೆಯೇ ನನ್ನ ಬಳಿಯಿದ್ದ ಸಂಪತ್ತೆಲ್ಲವನ್ನೂ ಅವನಿಗೆ ಕೊಟ್ಟೆನು. ಅವನು ಕೃತಜ್ಞತೆಯಿಂದ ಅದನ್ನು ಸ್ವೀಕರಿಸಿ

ಹೊರಟುಹೋದನು. ನಾನು ಅಲ್ಲಿಂದ ದ್ರಮಿಳ ಪಟ್ಟಣಕ್ಕೆ ಬಂದು, ಅಲ್ಲಿ ಅದೃಷ್ಟದಿಂದ ಮತ್ತೆ ಸಂಪತ್ತನ್ನು ಗಳಿಸಿ ಈ ರಾಜ್ಯಕ್ಕೆ ಬಂದಿದ್ದೇನೆ.''

ಪೋತಪನು ಇಷ್ಟು ಹೇಳುವಷ್ಟರಲ್ಲಿ ಚಂದ್ರಗುಪ್ತರಾಜನು ಧಿಗ್ಗನೆದ್ದು ವರ್ತಕನನ್ನು ಬರಸೆಳೆದು ಅಪ್ಪಿಕೊಂಡನು. ಆತ್ಮಹತ್ಯೆಗೆ ಸಿದ್ಧನಾಗಿದ್ದವನು ತಾನೇ ಎಂದೂ, ತನ್ನ ಪ್ರಾಣವನ್ನು ಉಳಿಸಿದವನು ಪೋತಪನೆಂದೂ ಎಲ್ಲರಿಗೂ ರಾಜನು ತಿಳಿಯ ಹೇಳಿದನು. ಪೋತಪನ ಗುರುತು ಮೊದಲೇ ಸಿಗದಿದ್ದುದಕ್ಕೆ ಮರುಗಿ, ಅವನನ್ನು ಬಹುವಾಗಿ ಸನ್ಮಾನಿಸಿದನು. ಪೋತಪನು ಅರಮನೆಯಲ್ಲಿಯೇ ಉಳಿದು ರಾಜ ಯೋಗ್ಯವಾದ ಸತ್ಕಾರಗಳನ್ನು ಪಡೆಯುತ್ತ ಹಲವು ದಿನಗಳನ್ನು ಕಳೆದು ತನ್ನ ಬಿಡದಿಗೆ ಬಂದನು.

ಕಾಲಕ್ರಮದಲ್ಲಿ ಪೋತಪನು ತನ್ನ ಸಂಪತ್ತೆಲ್ಲವನ್ನೂ ಬಡವರಿಗೆ ದಾನಮಾಡಿ, ತಾನು ಮುನಿವೃತ್ತಿಯನ್ನು ಹಿಡಿದನು. ಅವನಿಗೆ ಹೆಂಡಿರು ಮಕ್ಕಳು ಇರಲಿಲ್ಲ. ಹೀಗೆ ತಪಶ್ಚರ್ಯೆಮಾಡುತ್ತಿದ್ದಾಗ ಒಂದು ದಿನ ಕುಬೇರನ ಅನುಚರನೊಬ್ಬನು ಬ್ರಾಹ್ಮಣ ವೇಷವನ್ನು ತಳೆದು ಇವನ ಬಳಿ ಬಂದು ಈ ವೃತ್ತಾಂತವನ್ನು ಅರಿಕೆ ಮಾಡಿಕೊಂಡನು.

ವರರುಚಿಯ ಕಥೆ

'ಮಹಾನಂದಿಯ ಮಗನಾದ ಮಹಾಪದ್ಮನಂದನು ಬಲಿಷ್ಠನಾಗಿ ಕ್ಷತ್ರಿಯವಂಶವನ್ನೇ ನಿರ್ಮೂಲಮಾಡಿ, ಒಡೆತನವನ್ನು ಗಳಿಸಿಕೊಂಡ ಸಮಯದಲ್ಲಿ ಉತ್ಕಲ ದೇಶದಲ್ಲಿ ಕಲಾಪಿಯೆನ್ನುವ ಬ್ರಾಹ್ಮಣನಿದ್ದನು. ಕಾತ್ಯಾಯಿನೀ ದೇವಿಯ ಅನುಗ್ರಹದಿಂದ ಅವನಿಗೆ ಹೆಣ್ಣು ಮಗುವೊಂದು ಹುಟ್ಟಲು, ಅದನ್ನು ಕಾತ್ಯಾಯಿನಿಯೆಂದೇ ಕರೆದನು. ಆಕೆ ಸುಂದರಿಯಾಗಿ ಬೆಳೆದು ತಂದೆಯ ಅಗ್ನಿಹೋತ್ರಾದಿ ನಿತ್ಯಕರ್ಮಗಳಲ್ಲಿ ನೆರವಾಗುತ್ತಿದ್ದಳು. ಅಗ್ನಿಯು ಇವಳ ರೂಪರಾಶಿಗೆ ಮನಸೋತು ತೇಜಸ್ಸಿನಿಂದ ಅವಳನ್ನು ಹೊಕ್ಕು, ಆಕೆ ಗರ್ಭವತಿಯಾದಳು. ಇದು ಲೋಕಾಪವಾದಕ್ಕೆ ಕಾರಣವಾಗಿ ತಂದೆಯು ಮಗಳನ್ನು ವಿಂಧ್ಯದ ವನಾಂತರದಲ್ಲಿ ಬಿಡಬೇಕಾಯಿತು. ಅಲ್ಲಿ ಆಕೆ ತುಂಬ ಬೇಸರಗೊಂಡು ದಾವಾಗ್ನಿಯಲ್ಲಿ ಬೀಳಲುಪಕ್ರಮಿಸಿದಳು. ಆಗ ಅಗ್ನಿಯು ಆಕೆಗೆ ಮೈದೋರಿ, ಅವಳನ್ನು ಗೋದಾವರೀ ತೀರದ ಅಗ್ರಹಾರವೊಂದಕ್ಕೆ ಕರೆದೊಯ್ದನು. ಅಲ್ಲಿ ಅವಳಿಗೆ ಹುಟ್ಟಿದ ಮಗನೇ 'ವರರುಚಿ.'

ವರರುಚಿ ಐದು ವರ್ಷದ ಹುಡುಗನಾಗಿದ್ದಾಗ ಒಂದು ದಿನ ವ್ಯಾಡಿ ಮತ್ತು ಇಂದ್ರದತ್ತ ಎಂಬಿಬ್ಬರು ಬ್ರಾಹ್ಮಣರು ಮಾರ್ಗಮಧ್ಯೆ ಇವರ ಮನೆಯಲ್ಲಿ ತಂಗಿದ್ದರು. ಹಗಲು ವರರುಚಿ ಎಲ್ಲಿಯೋ ನಾಟಕ ನೋಡಲು ಹೋಗಿದ್ದವನು ರಾತ್ರಿ ಬಹಳ ಹೊತ್ತಿನ ಮೇಲೆ ಮನೆಗೆ ಬಂದನು. ತಾಯಿ ಸಿಟ್ಟಿಗೆದ್ದು ಅವನನ್ನು ತಾನು ನೋಡಿದ ನಾಟಕ ಯಾವುದು , ಏನು ಎಂದು ಕೇಳಿದಳು. ಒಡನೆಯೇ ವರರುಚಿ ತಾನು ನೋಡಿದ ನಾಟಕವನ್ನು ಮೊದಲಿನಿಂದ ಕಡೆಯವರೆಗೂ ಅಭಿನಯಿಸಿ ತೋರಿಸಿಬಿಟ್ಟನು. ಇದನ್ನು ನೋಡುತ್ತಿದ್ದ ವ್ಯಾಡಿ ಮತ್ತು ಇಂದ್ರದತ್ತ ಹುಡುಗನ ಪ್ರತಿಭೆಯನ್ನು ಮೆಚ್ಚಿಕೊಂಡು ಕೊಂಡಾಡಿದರು. ಅನಂತರ ವ್ಯಾಡಿಯು ಹುಡುಗನ ತಾಯಿಯನ್ನು ಕುರಿತು ಹೀಗೆಂದನು.

ವ್ಯಾಡಿಯ ಕಥೆ

'ಅಮ್ಮಾ, ನಾನು ಭಾನುವೆಂಬ ಬ್ರಾಹ್ಮಣನ ಮಗ ವ್ಯಾಡಿ. ನನಗೆ ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ದಕ್ಕಲಿಲ್ಲ; ವಯಸ್ಸು ಬಂದರೂ ಮುಕ್ಕನಾಗಿಯೇ ಉಳಿದೆ. ಬ್ರಹ್ಮದೆಯೆಂಬ ರೂಪವತಿ ಕನ್ಯೆಯೊಂದಿಗೆ ನನ್ನ ಮದುವೆಯೂ ಆಯಿತು. ಒಂದು ದಿನ ನಾನು ನನ್ನ ಹೆಂಡತಿಯ ಕಾಲಿಗೆ ಚಂದನವನ್ನು ತಿಕ್ಕುತ್ತ ಕುಳಿತ್ತಿದ್ದಾಗ, ಜೋಗಿಯೊಬ್ಬನು ಭಿಕ್ಷೆ ಬೇಡುತ್ತ ಬಂದ. ಅವನನ್ನು ನೋಡಿದೊಡನೆ ನನ್ನ ಹೆಂಡತಿ ನಕ್ಕಳು; ಜೋಗಿಯೂ ಇವಳನ್ನು ನೋಡಿ ನಕ್ಕನು. ಭಿಕ್ಷೆ ಪಡೆದು ಜೋಗಿ ಹೊರಟುಹೋದನಂತರ, ನಾನು ಇವರಿಬ್ಬರು ಒಬ್ಬರನ್ನೊಬ್ಬರು ನೋಡಿ ನಕ್ಕುದುದರ ಕಾರಣವನ್ನು ಕೇಳಿದೆ. ಅದಕ್ಕೆ ನನ್ನ ಹೆಂಡತಿಯು 'ಪೂರ್ವಜನ್ಮದಲ್ಲಿ ನಾನು ಈ ಜೋಗಿಯ ಮಠದಲ್ಲಿ ಇಲಿಯಾಗಿದ್ದೆ. ಒಮ್ಮೆ ಅವನು ಗಂಗಾಸ್ನಾನಕ್ಕೆ ಯಾತ್ರೆ ಹೊರಟಾಗ ಅವನಿಗೆ ತಿಳಿಯದಂತೆ ಅವನ ಕೈಚೀಲದಲ್ಲಿ ಸೇರಿಕೊಂಡುಬಿಟ್ಟೆ. ಕ್ಷೇತ್ರವನ್ನು ಮುಟ್ಟಿದಾಗ, ಜೋಗಿ ಸ್ನಾನಕ್ಕೆಂದು ನದಿಯಲ್ಲಿ ಇಳಿಯಲು ನಾನು ಚೀಲದಿಂದ ಹೊರಗೆ ಬಂದೆ . ಒಡನೆಯೇ ಹದ್ದೊಂದು ಹಾರಿ ಬಂದು ನನ್ನನ್ನು ಎತ್ತಿಕೊಂಡು ಹೋಗಿ ಬಿಟ್ಟಿತು. ಪುಣ್ಯಕ್ಷೇತ್ರದಲ್ಲಿ ಸತ್ತೆನಾಗಿ ಮನುಷ್ಯ ಜನ್ಮವೆತ್ತಿದೆ. ನಿನ್ನನ್ನು ಮದುವೆಯಾದೆ. ಪೂರ್ವಜನ್ಮಸ್ಮರಣೆ ಜೋಗಿಗೂ ಬಂದಿತು. ನನಗೂ ಬಂದಿತು. ಇದಕ್ಕಾಗಿ ನಕ್ಕೆವು ಅಷ್ಟೆ .'ಎಂದಳು. ಹೀಗೆ ಹೇಳಿದೊಡನೆಯೇ ಅವಳು ಪ್ರಜ್ಞೆತಪ್ಪಿ ಬಿದ್ದು ಸತ್ತಳು. ಆಗ ಆ ಜೋಗಿಯೇ ಹಿಂದಿರುಗಿ ಬಂದು ಅಳುತ್ತ ಕಂಗಲಾಗಿದ್ದ ನನಗೆ ತತ್ವೋಪದೇಶ ಮಾಡಿ, ಯೋಗದ ಮಾರ್ಗವನ್ನು ತಿಳಿಯಹೇಳಿ, ನನಗೂ ಜೋಗಿ ದೀಕ್ಷೆಯನ್ನು ಕೊಟ್ಟನು. ನನಗೆ ಆವರೆಗೆ ಜ್ಞಾನ

ಇರಲಿಲ್ಲವಾಗಿ ತಜ್ಞರ ಎದುರು ನಾನು ನಾಚಿಕೆಯಿಂದ ತಲೆ ತಗ್ಗಿಸುವಂತಾಗುತ್ತಿದ್ದಿತು. ಇದರಿಂದ ಬೇಸತ್ತು ನಾನು ಒಮ್ಮೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೋಗಿ ಅಲ್ಲಿ ತಪಸ್ಸು ಮಾಡಿದೆ. ದೇವರು ಮೈದೋರಿ ಶ್ರುತಧರನೊಬ್ಬನನ್ನು ಹುಡುಕಿ, ಅವನೊಂದಿಗೆ ಉಪವರ್ಷನೆಂಬ ಗುರುವಿನ ಬಳಿ ಶಿಷ್ಯವೃತ್ತಿ ಮಾಡುವಂತೆ ಸೂಚಿಸಿದನು. ಒಮ್ಮೆ ಕೇಳಿದುದನ್ನು ನೆಲೆಯಾಗಿ ನಿಲ್ಲಿಸಿಕೊಳ್ಳುವವನು ಶ್ರುತಧರ. ಅಂಥವನನ್ನು ಹುಡುಕುತ್ತಲೇ ಊರೂರು ತಿರುಗುತ್ತಿದ್ದೆ. ಈಗ ನಿನ್ನ ಮಗ ಅಂಥ ಶ್ರುತಧರನೆಂದು ಕಂಡಿದ್ದೇನೆ.''

ವ್ಯಾಡಿ ತನ್ನ ಕಥೆಯನ್ನು ಹೇಳಿ ಮುಗಿಸಿದನಂತರ ಇಂದ್ರದತ್ತನು ತನ್ನ ವೃತ್ತಾಂತವನ್ನು ಹೇಳಲುಪಕ್ರಮಿಸಿದನು.

ಇಂದ್ರದತ್ತನ ಕಥೆ

